# ಸಾರಂಗ ಮಠಾಧೀಶ್ವರರು.

✻

೩೪೦
6315

೧೯೫೭.

ಶಿವಾನುಭವ ಗ್ರಂಥಮಾಲಾ ನಂ. ೪೬

# ಸಾರಂಗ ಮಠಾಧೀಶ್ವರರು

ಸಂಪಾದಕರು

ರಾ॥ ಬ॥ ಫ. ಗು. ಹಳಕಟ್ಟಿ,

ಬಿ. ಏ. ಎಲ್. ಎಲ್. ಬಿ.

ವಿಜಾಪುರ.

[ ಈ ಗ್ರಂಥದ ಸ್ವಾಮಿತ್ವವು ಕಾದಿಸಲ್ಪಟ್ಟಿದೆ. ]

ಇಸ್ವಿ ೧೯೫೬]

[ಬೆಲೆ ೫ ಆಣೆ

24
1934.

ಇದನ್ನು ವಿಜಾಪುರದಲ್ಲಿ
ರಾ|| ಬ|| ಫ. ಗು. ಹಳಕಟ್ಟಿ ಇವರು ತಮ್ಮ
**ಹಿತಚಿಂತಕ ಪ್ರಿಂಟಿಗ ಪ್ರೆಸ್,** [ವಾರ್ಡ ನಂ. ೨. ವಿಜಾಪುರ]
ಇಲ್ಲಿ ಮುದ್ರಿಸಿದರು. ಮತ್ತು ಅವರು ಅದನ್ನು ಅಲ್ಲಿಯೇ
ಪ್ರಕಟಿಸಿದರು.

1934.

# ಪ್ರಸ್ತಾವನೆ.

ವೀರಶೈವ ಸಮಾಜದಲ್ಲಿ ಅನೇಕ ಮಹತ್ವದ ಮಠಗಳಿರುತ್ತವೆ. ಅವುಗಳ ಅಧಿಪತಿಗಳು ರಾಜಕೀಯ ಸಾಮಾಜಿಕ ಮತ್ತು ವಾಙ್ಮಯಾತ್ಮಕ ಮಹತ್ವದ ಸೇವೆಯನ್ನು ಸಲ್ಲಿಸಿದ್ದಾರೆ. ಆದರೆ ಅವರ ಹೆಸರುಗಳು ನಮ್ಮ ಸ್ಮೃತಿ ಪಥದಿಂದ ದೂರಾಗುತ್ತವೆ ಹೀಗಾಗುವದು ಸಮಾಜದ ಯೋಗ್ಯತೆಗೆ ಕುಂದಕವೇಸ`. ಸಾರಂಗಮಠಾಧೀಶ್ವರರು ಒಂದುಕಾಲದಲ್ಲಿ ನಮ್ಮ ಸಮಾಜದಲ್ಲಿ ಮಾತ್ರವಲ್ಲದೆ ಇಡೀ ಕರ್ನಾಟಕ ಮತ್ತು ಕೇರಳದಲ್ಲಿ ಅಗ್ರಸ್ಥಾನವನ್ನು ಹೊಂದಿದವರಾಗಿದ್ದರು. ಅವರ ಚರಿತ್ರೆಗಳನ್ನು ಸಂಗ್ರಹಿಸುವದು ಅವಶ್ಯವೆಂದು ತೋರಿದ್ದರಿಂದ ನಾವು ಅವುಗಳನ್ನು ಗ್ರಂಥರೂಪವಾಗಿ ಈಗ ಪ್ರಸಿದ್ಧ ಮಾಡಿದ್ದೇವೆ. ಸಾರಂಗಮಠಕ್ಕೆ ಹೊಂದಿದ ಒಬ್ಬ ಮಹನೀಯರು ಅವರ ಚರಿತ್ರೆಗಳನ್ನು ಹಿಂದಿನಕಾಲದಲ್ಲಿ ಸಂಗ್ರಹಿಸಿ ಬರೆದಿದ್ದು ನಮಗೆ ಅಕಸ್ಮಾತ್ತಾಗಿ ದೊರೆಯಿತು. ಅವುಗಳನ್ನು ನಾವು ಪರಿಶೀಲಿಸಲಾಗಿ ಸಾರಂಗಮಠಾಧೀಶ್ವರರು ಮುಸಲ್ಮಾನ ಧರ್ಮವು ಕರ್ನಾಟಕದಲ್ಲಿ ಪ್ರಸಾರವಾಗದಂತೆ ಅವರು ಪ್ರಯತ್ನಿಸಿದ್ದು ನಮಗೆ ತೋರಿಬಂದಿತು. ಇದರಲ್ಲಿ ಅವರು ಯಾವತರದ ರಕ್ತಪಾತವನ್ನು ಮಾಡಿಲ್ಲ. ಅವರು ತಮ್ಮ ಸಮಾಜದವರನ್ನು ಸಕಾಲದಲ್ಲಿ ಎಚ್ಚರಿಸುತ್ತ ಬಂದರು. ಇದರಿಂದ ವೀರಶೈವ ಧರ್ಮವು ಇಲ್ಲಿ ರಕ್ಷಣೆಯನ್ನು ಹೊಂದಿತು. ಅವರ ಕಾರ್ಯಗಳು ಈಗಿನ ಮಠಾಧೀಶರರೆಲ್ಲರಿಗೂ ಅನುಕರಣೀಯವಾಗಿರುತ್ತವೆ. ಆದ್ದರಿಂದ ನಾವು ಅವರ ಚರಿತ್ರೆಗಳನ್ನು ಇಲ್ಲಿ ಪ್ರಸಿದ್ಧಿಸಿದ್ದೇವೆ. ನಾವು ಮೂಲಗ್ರಂಥದ ಭಾಷೆ ಮತ್ತು ಪದ್ಧತಿಯನ್ನು ಅನುಸರಿಸುತ್ತ ಈ ಚರಿತ್ರೆಯನ್ನು ಬರೆದದ್ದಾಗಿದೆ. ಆದ್ದರಿಂದ ಈ ಗ್ರಂಥವು ಭಾಷಾದೃಷ್ಟಿಯಿಂದ ಪ್ರೌಢತರದ್ದಿರಲಿಕ್ಕಿಲ್ಲ. ಆದರೆ ಸಮಾಜದ ಇತಿಹಾಸದ ದೃಷ್ಟಿಯಿಂದ ಬಹು ಮಹತ್ವದ್ದೆಂದು ನಮಗೆ ತೋರಿದ್ದರಿಂದ ನಾವು ಈ ಗ್ರಂಥವನ್ನು ಶಿವಾನುಭವ ಗ್ರಂಥಮಾಲೆಯಲ್ಲಿ ಸೇರಿಸಿ ಪ್ರಕಟಿಸಿರುತ್ತೇವೆ.

ಇದರ ಪ್ರಕಟನೆಗೆ ಶ್ರೀಮದುದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ತರಳುಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿ

ಗಳವರು, ಮು. ಶಿರಿಗೆರೆ, ಜಿಲ್ಹಾ ಚಿತ್ರಕಲ್ಲದುರ್ಗ ಇವರು ನಮಗೆ ಸಹಾಯ ಮಾಡಿದ್ಧಕ್ಕೋಸ್ಕರ ನಾವು ಅವರಿಗೆ ಬಹಳ ಕೃತಜ್ಞರಾಗಿದ್ದೇವೆ.

ನಾವು ಇದೇತರಹದ ಚಿಕ್ಕ ಚಿಕ್ಕ ಗ್ರಂಥಗಳನ್ನು ಪ್ರಕಟ ಮಾಡುವ ಕಾರ್ಯವನ್ನು ಕೈಕೊಂಡಿರುತ್ತೇವೆ. ಈಚಿಗೆ ಕೆಲ ಮಹನೀಯರು ನಮ್ಮ ಸಲುವಾಗಿ ಒಂದು ನಿಧಿಯನ್ನು ಕೂಡಿಸಲು ಪ್ರಯತ್ನ ಮಾಡುತ್ತಲಿದ್ದಾರೆ. ಅವರಿಗೋಸ್ಕರ ನಾವು ಕೃತಜ್ಞರಾಗಿದ್ದೇವೆ. ಈ ನಿಧಿಯ ಉಪಯೋಗವನ್ನು ನಾವು ಇಂಥ ಗ್ರಂಥಗಳ ಪ್ರಕಟನೆಗೋಸ್ಕರವೇ ಉಪಯೋಗ ಮಾಡಬೇಕೆಂದು ಯೋಚಿಸಿದ್ದೇವೆ. ಈ ನಿಧಿ ಸಂಗ್ರಹ ಕಾರ್ಯವು ಸಿದ್ಧಿಗೆ ಹೋಗುವದು ಪರಮಾತ್ಮನ ಇಚ್ಛೆ. ಆದರೆ ವೀರಶೈವ ಬಾಂಧವರು ನಮ್ಮ ವಾಙ್ಮಯ ಕಾರ್ಯದಲ್ಲಿ ನಮಗೆ ಸಹಾಯ ಮಾಡಬೇಕೆಂದು ನಾವು ಅವರನ್ನು ವಿನಂತಿಸುತ್ತೇವೆ.

ವಿಜಾಪುರ ಫ. ಗು. ಹಳಕಟ್ಟಿ,

೧೬-೪-೧೯೫೬. ಸಂಪಾದಕ, ಶಿವಾನುಭವ.

# ಸಾರಂಗಮಠಾಧೀಶ್ವರರು.

## ಸಾರಂಗದೇವ.

ವೀರಶೈವ ಸಮಾಜದಲ್ಲಿರುವ ಮಠಗಳಿಗಿರುವಂಥ ವ್ಯವಸ್ಥೆಯು ಹಿಂದುಸ್ತಾನದಲ್ಲಿಯ ಬೇರೆ ಯಾವ ಸಮಾಜದಲ್ಲಿಯೂ ಇರುವದಿಲ್ಲೆಂದು ಹೇಳಬಹುದು. ಈ ಮಠಗಳ ಅಂತರ್ವ್ಯವಸ್ಥೆ ಮತ್ತು ಪರಸ್ಪರ ಸಂಬಂಧಗಳು ಒಂದು ಕ್ರಮಬದ್ಧ ರಾಜ್ಯ ಪದ್ಧತಿಯನ್ನು ಹೋಲುತ್ತವೆ. ಇಂಥ ವ್ಯವಸ್ಥೆಯು ವೀರಶೈವ ಸಮಾಜದಲ್ಲಿ ಬಹು ಕಾಲದಿಂದಲೂ ಇದ್ದ ಹಾಗೆ ತೋರುತ್ತದೆ. ಇದು ಯಾವ ರಾಜರ ಅಪ್ಪಣೆಯಿಂದ ಆದುದಲ್ಲ. ಸಮಾಜಕ್ಕೆ ಕಠಿಣ ಪರಿಸ್ಥಿತಿಯು ಉಂಟಾಗಲು ಅದನ್ನು ಎದುರಿಸಿ ಆತ್ಮ ಸಂರಕ್ಷಣೆಯನ್ನು ಮಾಡಿಕೊಳ್ಳುವ ಪ್ರಸಂಗಗಳು ಅದಕ್ಕೆ ಆಗಿಂದಾಗ್ಗೆ ಉಂಟಾದವು. ಅಲ್ಲದೆ ತನ್ನ ಸಾಮಾಜಿಕ ಮತ್ತು ಧಾರ್ಮಿಕ ಉಚ್ಚ ತತ್ವಗಳನ್ನು ಪ್ರಸಾರಗೊಳಿಸುವ ಭಾರವೂ ಅದಕ್ಕೆ ಒದಗಿತು. ಈ ಸ್ಥಿತಿಗಳಲ್ಲಿ ಅದು ಯೋಗ್ಯ ಮಾರ್ಗವನ್ನು ಹುಡುಕಿ ಮುಂದುವರಿಯ ಬೇಕಾಯಿತು. ಈ ಉದ್ದೇಶಗಳನ್ನು ಕೊನೆಗಾಣಿಸಲಿಕ್ಕೆ ಅದಕ್ಕೆ ಕೆಲವೊಂದು ವ್ಯವಸ್ಥೆಯನ್ನು ಮಾಡಿಕೊಳ್ಳುವ ಅವಶ್ಯಕತೆಯು ಉಂಟಾಯಿತು. ಆಗ ಅದು ಕೆಲವು ನಿರ್ಬಂಧಗಳನ್ನಿಟ್ಟುಕೊಂಡು ನಡೆಯಬೇಕಾಯಿತು. ಈ ಸ್ಥಿತಿಯಲ್ಲಿ ಸಮಾಜದಲ್ಲಿ ಕೆಲವು ಕಟ್ಟುಗಳು ಉದಯ ಹೊಂದಿದವು. ಇವುಗಳನ್ನು ಮಠಗಳ ವ್ಯವಸ್ಥೆಯಲ್ಲಿ ಕಾಣಬಹುದು.

ಈ ವೀರಶೈವ ಮಠಗಳು ವೀರಶೈವರಿದ್ದಲ್ಲಿ ಎಲ್ಲ ಕಡೆಗೂ ಪಸರಿಸಿರುತ್ತವೆ. ಅವುಗಳ ಅಧಿಕಾರಿಗಳಿಗೆ ಸಮಾಜದವರು ಮಾನ ಮನ್ನಣೆಗಳನ್ನು ಯಾವಾಗಲೂ ಕೊಡುತ್ತ ಬಂದಿರುವರು. ಈ ಮಠಗಳು ಗ್ರಾಮ ಸುಧಾರಣೆ ಮಾಡಲಿಕ್ಕೂ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲಿಕ್ಕೂ ಬಹು ಉಪಯುಕ್ತವಾಗಿರುತ್ತವೆ. ವೀರಶೈವ ಆದ್ಯ ಪ್ರವರ್ತಕರು

ಈ ಮಠಗಳ ಮೂಲಕವಾಗಿಯೇ ವೀರಶೈವ ಧರ್ಮವನ್ನು ಭಾರತದಲ್ಲಿ ಪ್ರಸಾರ ಪಡಿಸಿದರು. ಈ ಮಠಗಳಲ್ಲಿ ಬಹುಜನ ವಿದ್ವಾಂಸರು ಆಗಿ ಹೋಗಿದ್ದಾರೆ. ಅವರು ಅತ್ಯುಚ್ಚ ತರದ ಗ್ರಂಥಗಳನ್ನು ಬರೆದಿದ್ದಾರೆ. ಹೀಗೆ ಮಠಾಧಿಕಾರಿಗಳು ವೀರಶೈವ ಸಂಸ್ಕೃತಿಯನ್ನು ಪೋಷಿಸುತ್ತ ಬಂದಿದ್ದಾರೆ.

ಮಠಾಧಿಕಾರಿಗಳು ರಾಜಕಾರಣದಲ್ಲಿಯೂ ಕೂಡ ರಾಜರಿಗೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ರೀತಿಯಿಂದ ಸಹಾಯಮಾಡುತ್ತ ಬಂದಿದ್ದಾರೆ. ಬಸವೇಶ್ವರನ ಕಾಲದಲ್ಲಿ ಬಹುಜನ ಶಿವಶರಣರು ರಾಜಕಾರಣದಲ್ಲಿ ಸೇರಿದ್ದು ಕಂಡುಬರುತ್ತದೆ. ಸೊಡ್ಡಳ ಬಾಚರಸನು ಬಿಜ್ಜಳನ ಅಂತಃಪುರದಲ್ಲಿ ಸಾಮಾನುಗಳ ಪುರವಠೆಗಾರನಾಗಿದ್ದನು. ಮಧುವರಸನು ಅವನ ಗಜ ಸೈನ್ಯದ ಮೇಲೆ ಸೇನಾಧಿಪತಿಯಾಗಿದ್ದನು. ಇದೇ ಪ್ರಕಾರ ಬಿಜ್ಜಳನ ಸೈನ್ಯ ಮತ್ತು ರಾಜಕಾರಣದಲ್ಲಿ ಅನೇಕ ಶಿವಶರಣರು ಅಂಗವಹಿಸಿ ಕಾರ್ಯಮಾಡಿದ್ದು ತಿಳಿದುಬರುತ್ತದೆ. ಇದರಿಂದ ಬಸವೇಶ್ವರನಿಗೆ ರಾಜ್ಯದ ಆಡಳಿತೆಯಲ್ಲಿ ಅವನಿಗೆ ಬಹಳ ಸಹಾಯವಾಗುತ್ತಿತ್ತು. ಹೀಗೆ ಶಿವಶರಣರು ಬಸವೇಶ್ವರನ ಕಾಲದಲ್ಲಿ ಮಾತ್ರವಲ್ಲ, ಅವನ ತರುವಾಯ ಸಹ ರಾಜಕಾರಣದಲ್ಲಿದ್ದುದು ಕಂಡುಬರುತ್ತದೆ. ಮೋಳಿಗೆಯ ಮಾರಯ್ಯ, ಹಂಪೆಯ ಹರೀಶ್ವರ, ಪುಲಿಗೆರೆಯ ಜಕ್ಕಣ್ಣ ಹೀಗೆ ಅನೇಕ ಉದಾಹರಣೆಗಳನ್ನು ನಾವು ಕೊಡಬಹುದು. ಸಾರಂಗಮಠದವರಾದರೂ ವೀರಶೈವ ಧರ್ಮಪ್ರಸಾರದಲ್ಲಿ ಬಹಳ ಕಾರ್ಯಮಾಡಿದ್ದಾನೆ.

ಬಸವೇಶ್ವರನ ಕಾಲದಲ್ಲಿ ಬಹುಜನ ಶಿವಶರಣರು ಉತ್ಪನ್ನರಾಗಿ ತಮ್ಮ ಸಮಾಜ ಮತ್ತು ಧರ್ಮ ಇವುಗಳಿಗೋಸ್ಕರ ಯುದ್ಧಮಾಡಿದ್ದಾರೆ. ಬಿಜ್ಜಳನ ತರುವಾಯ ಒಂದುನೂರು ವರ್ಷಗಳಾದ ಮೇಲೆ ಮುಸಲ್ಮಾನರ ಹಾವಳಿಗಳು ದಕ್ಷಿಣ ದೇಶದ ಕಡೆಗೆ ಹರಿದು ಬರಹತ್ತಿದವು. ಅವರ ಹಾವಳಿಗಳಿಗೆ ಮಹಾರಾಷ್ಟ್ರ ದೇಶದವರು ಮೊದಲು ತುತ್ತಾದರು, ಆಗ ಅನೇಕ ಸಂತರು ಮಹಾರಾಷ್ಟ್ರ ದೇಶದಲ್ಲೆಲ್ಲ ಉಗಮಿಸಿ ಹಿಂದೂ ಧರ್ಮವನ್ನು ಕಾಪಾಡಿದರು. ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಮುಸಲ್ಮಾನರ ದಾಳಿಗಳು ಕನ್ನಡ ದೇಶದಲ್ಲಿ ಪ್ರಾರಂಭವಾದವು. ಆದರೆ ಅಷ್ಟರಲ್ಲಿ ಈ ಪ್ರಾಂತದಲ್ಲಿ ವ್ಯವಸ್ಥಿತವಾದ ಮಠಗಳಾಗಿದ್ದರಿಂದ ಮುಸಲ್ಮಾನರಿಗೆ ಹಿಂದೂ ಜನರನ್ನು ಧರ್ಮಾಂತರ



ಮಾಡಲಿಕ್ಕೆ ಶಕ್ಯವಾಗಲಿಲ್ಲ. ಇದೇ ಕಾಲದಲ್ಲಿ ಸಾರಂಗದೇವರೆಂಬ ಶಿವಾನುಭವಿಗಳು ಉದಯವಾಗಿ ವೀರಶೈವ ಧರ್ಮವನ್ನು ರಕ್ಷಿಸಿದರು. ಇವರ ಚರಿತ್ರೆಯು ಬಹು ಅಗಾಧವಾಗಿದೆ. ಅದನ್ನು ನಾವು ಇಲ್ಲಿ ಕೊಡುತ್ತೇವೆ.

ಸಾರಂಗ ಮಠಾಧೀಶರಲ್ಲಿ ಮೂವರು ಬಹು ಪ್ರಸಿದ್ಧರಾಗಿದ್ದಾರೆ. ಅವರು ಬಸವೇಶ್ವರನ ತರುವಾಯ ಒಂದು ಶತಮಾನದಿಂದ ಕೆಲವು ಶತಮಾನಗಳವರೆಗೆ ಆಗಿರುತ್ತಾರೆ. ಇವರ ಮೂಲ ಪೀಠವು ಕೃಷ್ಣಾ ಮಲಾಪಹಾರೀನದಿಗಳ ಸಂಗಮ ಸ್ಥಳವೇ ಇರುತ್ತದೆ. ಇವರು ದಕ್ಷಿಣ ಹಿಂದುಸ್ಥಾನದಲ್ಲೆಲ್ಲ ಅನೇಕ ಮಠಗಳನ್ನು ಸ್ಥಾಪಿಸಿದ್ದು ಅವುಗಳಿಗೆ ಅನೇಕ ಶಾಖಾ ಮಠಗಳೂ ಸಹ ಇವೆ. ಈ ಮಠಗಳಲ್ಲಿಯ ಅನೇಕ ಅಧಿಪತಿಗಳು ಹೆಚ್ಚಿನ ತರಗತಿಯ ಧಾರ್ಮಿಕ ಕಾರ್ಯಗಳನ್ನು ಮಾಡಿದ್ದು ಕಂಡುಬರುತ್ತದೆ. ಆದರೆ ಈ ಮಠಗಳಿಗೆಲ್ಲ ಸ್ವತಂತ್ರ ಆಸ್ತಿಯು ಇದ್ದು ಅವುಗಳ ವ್ಯವಸ್ಥೆಯು ಆಯಾ ಮಠಾಧೀಶ್ವರರ ಕಡೆಗೆಯೇ ಇರುತ್ತದೆ. ಈ ಸಾರಂಗ ಮಠಗಳು ವಿರಕ್ತಮಠಗಳಿರದೆ ಗುರುಸ್ಥಲದ ಮಠಗಳಾಗಿರುತ್ತವೆ. ಇವೆಲ್ಲವು ಮರುಳಸಿದ್ಧೇಶ್ವರನ ಶಾಖೆಗೆ ಹೊಂದಿದವು ಇದ್ದು ಇವುಗಳಲ್ಲಿ ಬಹಳ ಜನ ಮಠಾಧೀಶರು ಸಂಸಾರಿಕರಿದ್ದಾರೆ. ಅವರು ಸಮಾಜದಲ್ಲಿ ಗಣನೀಯರು ಆಗಿರುತ್ತಾರೆ. ಮೂಲ ಸಾರಂಗ ಮಠಾಧಿಪತಿಗಳು ಸಂಸಾರಿಕರೇ ಇದ್ದರು. ನಾವು ಕೆಳಗೆ ಕಾಣಿಸಿದ ಸಂಗತಿಗಳು ಯಾವ ಆಧಾರದಿಂದ ಬರೆದಿದ್ದೇವೆಂಬುದನ್ನು ಸ್ವಲ್ಪದರಲ್ಲಿ ವಿವರಿಸುವದು ಬಹು ಅವಶವಾಗಿದ್ದು ಅದನ್ನು ಕೆಳಗೆ ಕಾಣಿಸಿರುತ್ತೇವೆ.

ಕಪ್ಪಡಿಯ ಸಂಗಮೇಶ್ವರ ದೇವಾಲಯದ ಆವಾರದಲ್ಲಿ ಸಾರಂಗಮಠವೆಂಬ ಕಟ್ಟಡವಿದ್ದು ಇದೇ ಮೂಲ ಸಾರಂಗೇಶ್ವರರ ಮುಖ್ಯಸ್ಥಾನವಾಗಿತ್ತು. ಈ ಮಠವನ್ನೇ ಅವರು ಮುಖ್ಯವಾಗಿಟ್ಟುಕೊಂಡು ಇಲ್ಲಿಯೇ ಅವರು ಐಕ್ಯ ಹೊಂದಿದರು. ಅವರ ಗದ್ದುಗೆಯು ಈ ಮಠದಲ್ಲಿಯೇ ಇರುತ್ತದೆ.

ಸಾರಂಗ ದೇವನ ಚರಿತ್ರೆಯ ಅಂಶಗಳಿದ್ದ ಒಂದು ಕೈಬರಹದ ಹೊತ್ತಿಗೆಯನ್ನು ಈ ಕಪ್ಪಡಿಯ ಸಾರಂಗಮಠದ ಅಧಿಕಾರಿಗಳು ಏಳೆಂಟು ವರ್ಷಗಳ ಹಿಂದೆ ನನ್ನ ಕಡೆಗೆ ತಂದುಕೊಟ್ಟರು. ಇದರಲ್ಲಿ ೫೪ ಪುಟಗಳಿದ್ದು ಅದರಲ್ಲಿ ವಾರ್ಧಿಕ ಷಟ್ಪದಿಯಲ್ಲಿ ಬರೆದ ನಾಲ್ಕು ಆಧ್ಯಾಯಗಳು ಇರುತ್ತವೆ. ಗ್ರಂಥದ ಅಂತ್ಯದಲ್ಲಿ ಬರೆದಿರುವದೇನಂದರೆಃ- ಗಣನೆ ಎಷ್ಟು ಎಂದರೆ ೪೩ ವಾರ್ಧಿಕ ೫೧

ಗ್ರಂಥ ೪ ಕಂದ ೪ ಗದ್ಯಸಂಪೂರ್ಣ ಎಂದು ಇದೆ. ಇದರ ಮೇಲಿಂದ ಈ ಗ್ರಂಥದ ವಿಸ್ತಾರವು ಎಷ್ಟಿದೆ ಎಂಬುದನ್ನು ನಾವು ತಿಳಿಯಬಹುದು. ಗ್ರಂಥದ ಅಂತ್ಯದಲ್ಲಿ ಕೆಳಗೆಬರೆದಂತೆ ವಿವರಣೆ ಇರುತ್ತದೆ.

ಶ್ರೀಮತ್ ಪರಮ ಪಾವನ ಚಾರು ಚರಿತ್ರೆ ಚರಚಕ್ರವರ್ತಿ ಘನಲಿಂಗ ಚರಮೂರ್ತಿ ಕಾಶೀಸಾರಂಗ ಸಿಂಹಾಸನಪತಿ ಧರ್ಮ ಕಪ್ಪಡಿ ಕಾರಣ ಕರ್ತರಾದಂಥ ವೃಷಭಾದ್ರಿಯಚಲವಾಸ ಸಮ್ಮತ ಪರುತ ಪೇಟೆ ಅಧಿಕಾರಿಗಳಾದಂಥ ಗುರುಸಾರಂಗ ದೇವರ ಶಿವಸಂಗಪ್ಪನವರು ಮಾಡಿದ ಚತುರ್ಥಾಧ್ಯಾಯವು.

ಇದರ ಮೇಲಿಂದ ಈ ಗ್ರಂಥಕ್ಕೋಸ್ಕರ ಶಿವಸಂಗಪ್ಪ ಎಂಬ ಹೆಸರಿನ ಮಠಾಧೀಶ್ವರರು ವಿಷಯ ಸಂಗ್ರಹಮಾಡಿದರೆಂದು ತಿಳಿದು ಬರುತ್ತದೆ.

ಈ ಗ್ರಂಥವಲ್ಲದೆ ವಿಜಾಪೂರ ಜಿಲ್ಲಾ ಗುಳೇದಗುಡ್ಡದಲ್ಲಿಯೂ ಸಾರಂಗ ಮಠವಿದ್ದು ಈ ಮಠದ ಅಧಿಕಾರಿಗಳಲ್ಲಿಯೂ ಸಾರಂಗದೇವರ ಚರಿತ್ರೆಯು ಇದೆ. ಇದನ್ನು ನನಗೆ ನೋಡಲು ಈ ಮಠದ ಅಧಿಕಾರಿಗಳು ನನಗೆ ಅವಕಾಶ ಕೊಟ್ಟಿದ್ದು ಇದರಲ್ಲಿಯ ವೃತ್ತಾಂತವು ಸಂಗಮ ಮಠದಲ್ಲಿಯ ಗ್ರಂಥಕ್ಕೆ ಕೂಡುವದಲ್ಲದೆ ಇದರಲ್ಲಿ ಗುಳೇದಗುಡ್ಡ ಮಠಕ್ಕೆ ಸಂಬಂಧಪಟ್ಟ ಈಚಿನ ಅನೇಕ ವಿಷಯಗಳು ಸೇರ್ಪಡೆಯಾಗಿರುತ್ತವೆ. ಮೇಲ್ಕಂಡ ಎರಡು ಗ್ರಂಥಗಳ ಆಧಾರದಿಂದ ಸಾರಂಗ ದೇವರ ಚರಿತ್ರೆಯು ಇಲ್ಲಿ ಬರೆಯಲ್ಪಟ್ಟಿದೆ.

ಈ ಎರಡು ಹಸ್ತಲಿಖಿತ ಗ್ರಂಥಗಳಲ್ಲಿ ಕಪ್ಪಡಿಸಂಗಮೇಶ್ವರದಲ್ಲಿಯ ಚರಿತ್ರೆಯು ಪುರಾತನದ್ದು ಇದೆ. ಅದರಲ್ಲಿ ಮೂಲ ಸಾರಂಗೇಶ್ವರನ ಚರಿತ್ರೆಯು ಬಂದಿರುತ್ತದೆ.

ಸಾರಂಗದೇವನ ಜನ್ಮಸ್ಥಳವು ಯಾವುದು ಮತ್ತು ಅವನ ತಾಯಿತಂದೆಗಳಾರು ಮತ್ತು ಅವನು ಯಾವಾಗ ಇದ್ದನು ಎಂಬ ವಿಷಯಗಳು ಈ ಎರಡೂ ಗ್ರಂಥಗಳಿಂದ ಏನೂ ತಿಳಿಯುವದಿಲ್ಲ. ಆದರೂ ಅವನು ಮಾಡಿದ ಕಾರ್ಯಗಳಿಂದ ಅವನು ಯಾವಾಗ್ಗೆ ಇದ್ದನೆಂಬುದನ್ನು ನಾವು ಊಹಿಸಬಹುದು.

ಅವನ ಚರಿತ್ರೆಯು ಒಂದು ಪುರಾಣದಂತಿದ್ದು ಅದರಿಂದ ತಿಳಿದು ಬರುವದೇನಂದರೆ, ಶಿವನು ತನ್ನ ಒಡ್ಡೋಲಗದಲ್ಲಿದ್ದಾಗ್ಗೆ ನಾರದಮುನಿಯು



ಅವನಲ್ಲಿಗೆ ಬಂದು ಪೃಥ್ವಿಯಲ್ಲಿ ದುರ್ನೀತಿಗಳು ಬಹಳ ಬೆಳೆದಿವೆ. ಆದ್ದರಿಂದ ಒಬ್ಬ ಮಹಾಪುರುಷನನ್ನು ಅಲ್ಲಿಗೆ ಕಳಿಸಿ ಜನರನ್ನು ಪುನೀತರನ್ನಾಗಿ ಮಾಡಬೇಕೆಂದು ವಿಜ್ಞಾಪಿಸಿಕೊಂಡನು. ಆಗ ಶಿವನು ತನ್ನ ದಕ್ಷಿಣಭಾಗವನ್ನು ಅವಲೋಕಿಸಲು ಆ ಭಾಗದಿಂದ ಸಾರಂಗಮುನಿವರನು ಉತ್ಪನ್ನನಾದನು. ಆಗ ಶಿವನು ಅವನಿಗೆ- ಭೂಲೋಕದಲ್ಲಿ ನೀನು ಅವತರಿಸಿ ಅನಾಚಾರವು ಬಹು ಹೆಚ್ಚಾಗಿದೆ. ಜನರಲ್ಲಿ ಸದಾಚಾರವು ಉಳಿದಿರುವದಿಲ್ಲ. ನೀನು ಪೃಥ್ವಿಯಲ್ಲಿ ಅವತರಿಸಿ ಜನರನ್ನು ಉದ್ಧರಿಸು ಎಂದು ತಿಳಿಸಿದನು. ಆಗ ಸಾರಂಗಮುನಿವರನು ಮೊದಲು ಕಾಶೀಪಟ್ಟಣಕ್ಕೆ ಬಂದನು. ಅಲ್ಲಿ ಕಲೀಂದ್ರರು (ಮುಸಲ್ಮಾನರು) ಜನರ ಮೇಲೆ ರಾಜ್ಯ ಮಾಡುತ್ತ ಪ್ರಬಲರಾಗಿದ್ದರು. ಆಗ ಈ ಭಾಗದಲ್ಲಿ ಮಳೆಯು ಬೀಳದೆ ಜನರು ತಾಪತ್ರಯವನ್ನು ಪಡುತ್ತಿರುವದನ್ನು ಸಾರಂಗಮುನಿಯು ನೋಡಿ ಅಲ್ಲಿ ಪರ್ಜನ್ಯವು ಬರುವಂತೆ ಮಾಡಿದನು. ಹೀಗೆ ಜನರ ಸಂಕಷ್ಟಗಳನ್ನು ದೂರಮಾಡಿದನು. ಆಗ ಸಾರಂಗದೇವನಿಗೆ " ಮಳೆಯ ಮಲ್ಲೇಶ " ನೆಂಬ ಹೆಸರು ಪ್ರಾಪ್ತವಾಯಿತು. ಆಗ ಬಾದಶಹನು ಅವನನ್ನು ತನ್ನಲ್ಲಿಗೆ ಬರಮಾಡಿಕೊಂಡು ಅವನು ಮಹತ್ವಿಕನೆಂದು ಅವನಿಗೆ ತಿಳಿಯಲು ಬಾದಶಹನು ಸಾರಂಗಮುನಿಯ ಶಿಷ್ಯತ್ವವನ್ನು ಅಂಗೀಕರಿಸಿದನು. ಬಾದಶಹನು ಅವನಿಗೋಸ್ಕರ ಒಂದು ಮಠವನ್ನು ಕಾಶಿಯಲ್ಲಿ ಕಟ್ಟಿಸಿಕೊಡಲು ಸಾರಂಗದೇವನು ಅಲ್ಲಿ ಬಸವಲಿಂಗ ದೇಶಿಕನೆಂಬ ಶಿಷ್ಯನನ್ನು ಇಟ್ಟು ತಾನು ದಕ್ಷಿಣ ದೇಶಕ್ಕೆ ಧರ್ಮಬೋಧೆ ಮಾಡುತ್ತ ತೆರಳಿದನು.

ಇದರಿಂದ ಸಾರಂಗದೇವನು ಕಾಶೀಪಟ್ಟಣದವನೆಂಬ ಅನುಮಾನವು ಉಂಟಾಗುತ್ತದೆ. ಸಾರಂಗದೇವನ ಒಕ್ಕಣಿಕೆಯಲ್ಲಿ "ಘನಲಿಂಗ ಚರಮೂರ್ತಿ ಕಾಶೀಸಾರಂಗ ಸಿಂಹಾಸನಪತಿ" ಎಂಬ ಶಬ್ದಗಳು ಇರುವದು ಕಂಡುಬರುತ್ತದೆ. ಸಾರಂಗದೇವನ ಹೆಸರಿದ್ದ ಪತ್ರಗಳನ್ನು ಕಪ್ಪಡಿ ಸಂಗಮನಾಥ ಮತ್ತು ಗುಳೇದಗುಡ್ಡ ಮಠಸ್ಥರು ನನಗೆ ತೋರಿಸಿದರು. ಅವುಗಳಲ್ಲಿ 'ಕಾಶೀ ಸಾರಂಗ ಸಿಂಹಾಸನಪತಿ' ಎಂದು ಬರೆದದ್ದನ್ನು ನಾನು ನೋಡಿದ್ದೇನೆ.

ಕಾಶೀ ಪಟ್ಟಣದಲ್ಲಿ ಸಾರಂಗದೇವನಂತೆ ಕೆಲವು ಶಿವಶರಣರು ಉದ್ಭವಿಸಿದ್ದು ಅವರು ವಚನಕಾರರು ಇದ್ದಾರೆಂಬುದು ಗೊತ್ತಾಗುತ್ತದೆ. ಇದರ ಮೇಲಿಂದ ಕರ್ನಾಟಕ ದೇಶದಲ್ಲಿ ಆಗಿ ಹೋದ ಅನೇಕ ಶಿವಶರಣರು ಉತ್ತರ ದೇಶದಲ್ಲಿ

ಬಂದು ತಮ್ಮ ಷಟ್‌ಸ್ಥಲ ಸಿದ್ಧಾಂತವನ್ನು ಪ್ರಸಾರಗೊಳಿಸಿರಬಹುದೆಂದು ತೋರುತ್ತದೆ. ಈ ಶಿವಶರಣರಲ್ಲಿ ಮುಖ್ಯರಾದವರು ರೇವಣಸಿದ್ಧೇಶ್ವರ, ಅಲ್ಲಮಪ್ರಭು ಇವರು ಇದ್ದು ಬಸವೇಶ್ವರನು ಸಹ ಕಾಶ್ಮೀರದ ವರೆಗೂ ಪ್ರವಾಸ ಮಾಡಿದಂತೆ ವೀರಶೈವ ಪುರಾಣಗಳಿಂದ ತೋರಿ ಬರುತ್ತದೆ. ಬಹು ಜನ ಜಂಗಮರು ಕಾಶ್ಮೀರದಲ್ಲಿದ್ದು ಅವರು ಆಗಿಂದಾಗ್ಗೆ ಕಲ್ಯಾಣ ಉಜ್ಜಯಿನಿ, ಶ್ರೀಶೈಲ ಇಲ್ಲಿಗೂ ಬಂದು ಶಿವತತ್ವ ಪ್ರಸಾರ ಕಾರ್ಯಗಳನ್ನು ಮಾಡಿರುವರು.

ಸಾರಂಗದೇವನು ಕಾಶಿಯಲ್ಲಿ ಬಾದಶಹನಿಂದ ಹಿಂದುಗಳ ಧರ್ಮಕ್ಕೆ ಚ್ಯುತಿ ಬಾರದಂತೆ ವರ್ತಿಸುವೆನೆಂದು ಆಶ್ವಾಸನವನ್ನು ಹೊಂದಿದವನಾಗಿಅವನು ದಕ್ಷಿಣ ಪ್ರಾಂತಕ್ಕೆ ಬರುವವನಾದನು. ಈ ದಕ್ಷಿಣ ಪ್ರಾಂತದಲ್ಲಿ ಶ್ರೀಶೈಲದಲ್ಲಿ ಒಂದು ಸಂಸ್ಥಾನವಿದ್ದು ಅಲ್ಲಿ ಸಾರಂಗದೇವನೆಂಬ ಅರಸನು ಆಳುತ್ತಿದ್ದನು. ಅವನಿಗೆ ಕೈಕಾಲುಗಳಿಲ್ಲದೆ ಕಷ್ಟದಿಂದ ಬಳಲುತ್ತಿದ್ದನು. ಆಗ ಅವನು ಅಲ್ಲಿ ಕಷ್ಟತರವಾದ ತಪಸ್ಸನ್ನಾಚರಿಸುತ್ತಿದ್ದನು. ಆಗ ಮಳೆಯ ಮಲ್ಲೇಶ್ವರನು 'ಕಪಿಲ ಸಿದ್ಧ' ಎಂಬ ಹೆಸರಿನಿಂದ ಈ ಪ್ರಾಂತದಲ್ಲೆಲ್ಲ ಬಹು ಪ್ರಸಿದ್ಧಿಯನ್ನು ಹೊಂದಿದ್ದನು. ಆಗ ಸಾರಂಗದೇವ ನೃಪತಿಯು ಅವನನ್ನು ತನ್ನಲ್ಲಿಗೆ ಬರಮಾಡಿಕೊಂಡು ಅವನಿಗೆ ಶರಣಾಗತನಾಗಲು ಅವನಿಗೆ ಕೈಕಾಲುಗಳು ಬಂದವು. ಆಗ ಅರಸನು ಅವನಿಗೋಸ್ಕರ ಬಹಳ ಭಕ್ತಿಯನ್ನು ತಾಳಿ ಅವನಿಗೆ ಸಿದ್ದಾಪೂರ ಎಂಬ ಗ್ರಾಮವನ್ನು ಕಾಣಿಕೆಯಾಗಿ ಅರ್ಪಿಸಿದನು. ಮತ್ತು ತನ್ನ ಹೆಸರನ್ನೇ ಇಟ್ಟುಕೊಳ್ಳಬೇಕೆಂದು ಅರಸನು ವಿಜ್ಞಾಪಿಸಿಕೊಳ್ಳಲು ಸಾರಂಗ ಮುನಿಯು ತನ್ನ ಮೊದಲಿನ ಹೆಸರು ಕಪಿಲಸಿದ್ಧೇಶ್ವರ ಎಂಬುದು ಇದ್ದು ಆದನ್ನು ಬಿಟ್ಟು 'ಸಾರಂಗದೇವ' ನೆಂಬ ಹೆಸರನ್ನು ತಾಳಿದನು. ಮತ್ತು ಶ್ರೀ ಪರ್ವತದಲ್ಲಿ ಸಾರಂಗಮಠವೆಂಬ ಹೆಸರಿನಿಂದ ಒಂದು ಮಠವನ್ನು ಸ್ಥಾಪಿಸಿದನು. ಈ ಸಾರಂಗ ಮಠವು ಈಗಲೂ ಅಲ್ಲಿ ಅಸ್ತಿತ್ವದಲ್ಲಿದೆ.

ಈ ಕಾಲದಲ್ಲಿ ಶ್ರೀಶೈಲದಲ್ಲಿ ಜನವಸತಿಯುಳ್ಳ ಒಂದು ಪಟ್ಟಣವು ಅಸ್ತಿತ್ವದಲ್ಲಿತ್ತು. ಈ ಸ್ಥಳವು ಈಗಿನಂತೆ ನಿರ್ಜನ ಪ್ರದೇಶವಾಗಿರಲಿಲ್ಲ. ಅಲ್ಲಿಯ ದೇವಾಲಯಗಳಿಗೆ ಹಿಂದೂ ರಾಜರು ಭಕ್ತಿಯುಳ್ಳವರಾಗಿ ನಡೆಯುತ್ತ ಅವುಗಳಿಗೆ ಕಾಣಿಕೆಗಳನ್ನು ಕೊಡುವರು. ಅಲ್ಲಿ ಒಂದು ಸಿಂಹಾಸನವೂ ಸ್ಥಾಪಿತವಾಗಿತ್ತು. ದೇವರದಾಸಿಮಯ್ಯನಂತೆ ಬಹುಜನರು ಅಲ್ಲಿ ತಪಸ್ಸನ್ನಾಚರಿಸು



ತ್ತಿದ್ದರು. ಮುಂದೆ ಪರಧರ್ಮೀಯರ ಹಾವಳಿ ಹೆಚ್ಚಾಗಲು ಇಲ್ಲಿ ಜನರು ಬಂದು ನಿಲ್ಲುವದು ನಿಂತು ಹೋಯಿತು. ಆಗ ಅದು ನಿರ್ಜನ ಸ್ಥಲವಾಯಿತು.

ಈ ಕಾಲದಲ್ಲಿ ಈ ಸ್ಥಳದಲ್ಲಿ ಚಾಲುಕ್ಯ ರಾಜರೂ, ಯಾದವ ರಾಜರೂ, ಗಜಪತಿ ರಾಜರೂ ಕೆಲಕಾಲ ಆಳಿದರು. ಅವರು ಆಳಿ ಹೋದ ಬಳಿಕ ಇಸ್ಲಾಮ ಧರ್ಮದ ಪ್ರಾಬಲ್ಯವು ಹೆಚ್ಚಾಯಿತು. ಆದರೆ ಬೇಡರಾದ ಕಂಪಿಲ ರಾಜನು ಮುಸಲ್ಮಾನರನ್ನು ಸೋಲಿಸಿ ತನ್ನ ರಾಜ್ಯವನ್ನು ಸ್ಥಾಪಿಸಿದನು. ಆದರೆ ಮುಂದೆ ಸ್ವಲ್ಪ ಕಾಲದಲ್ಲಿಯೇ ಈ ರಾಜನ ರಾಜ್ಯವೂ ನಷ್ಟವಾಯಿತು. ಆಗ ಹಿಂದೂ ಧರ್ಮಕ್ಕೆ ಗ್ಲಾನಿಯು ತಲೆದೋರಿತು. ಈ ಪುಲಿಚೆರೆಯ ರಾಜನು ದಕ್ಷಿಣ ದೇಶದಲ್ಲಿ ಪ್ರಬಲನಾಗಲಾಗಿ ಅವನು ಸಾರಂಗದೇವನನ್ನು ಶ್ರೀಶೈಲದಿಂದ ತನ್ನ ರಾಜ್ಯಕ್ಕೆ ಬರಮಾಡಿಕೊಂಡು ಕುಂಭಕೋಣೆ ಎಂಬ ಗ್ರಾಮದಲ್ಲಿ ಅವನಿಗೆ ಒಂದು ವಿಶಾಲವಾದ ಮಠವನ್ನು ಕಟ್ಟಿಸಿ ಕೊಟ್ಟನು. ಆಗ ಸಾರಂಗದೇವನು ಮೂರುಸಾವಿರ ಲಿಂಗಧೀರರಿಗೆ ವೀರಶೈವ ದೀಕ್ಷೆಯನ್ನು ಕೊಟ್ಟು ಅವರನ್ನು ಮಠದಲ್ಲಿಟ್ಟುಕೊಂಡು ಪರವಾದಿಗಳ ಆಕ್ರಮಣವನ್ನು ತಡೆದನು. ಒಂದು ವೇಳೆ ಅವನು ಹೀಗೆ ಜನರನ್ನು ನೆರಿಸಿ ಇಸ್ಲಾಮ ದರ್ಮೀಯರನ್ನು ಪ್ರತಿಭಟಿಸದೆ ಇದ್ದಿದ್ದರೆ ಇಸ್ಲಾಮ ಧರ್ಮವು ಈ ಭಾಗದಲ್ಲಿ ಬೆಳೆಯುತ್ತ ಹೋಗುತ್ತಿತ್ತು. ಈ ಸ್ಥಿತಿಯುಂಟಾದಾಗ ಕರ್ನಾಟಕದ ಉತ್ತರಭಾಗದಲ್ಲಿ ಬಾಮನೀ ರಾಜ್ಯವು ಸ್ಥಾಪಿಸಲ್ಪಟ್ಟಿತು. ಆಗ ವಿಜಯನಗರದ ರಾಜರ ಕೂಡ ಘೋರವಾದ ಕಾಳಗಗಳು ನಡೆದವು. ಆಗ ಅಸಂಖ್ಯ ಹಿಂದೂ ಜನರು ಘಾತಿಸಲ್ಪಟ್ಟರು. ಅನಾಚಾರ ದುರ್ಮಾರ್ಗಗಳು ಹೆಚ್ಚಿದವು. ಈ ಸ್ಥಿತಿಯುಂಟಾದದ್ದನ್ನು ಸಾರಂಗದೇವನು ತಿಳಿದು ಅವನು ಕುಂಭಕೋಣೆಯ ಮಠದಲ್ಲಿ ಸಿದ್ಧವೀರ ದೇವರೆಂಬ ಶಿಷ್ಯನನ್ನು ನೇಮಿಸಿದನು. ಮತ್ತು ಪುದುಚರೆಯ ಅರಸನಿಗೆ ಶಿವದೀಕ್ಷೆಯನ್ನು ಕೊಟ್ಟನು. ಈ ಕಾಲದಲ್ಲಿ ಈ ಮಠಕ್ಕೆ ಲಕ್ಷಾಂತರ ರೂಪಾಯಿ ಬೆಲೆಯುಳ್ಳ ಸ್ವಾಸ್ತಿಗಳೂಉಂಬಳಿಗಳೂ ದೊರೆದವು. ಆಗ ಮಲಬಾರ ಪ್ರಾಂತದ ವರೆಗೆ ಸಾವಿರಾರು ಜನ ಶಿಷ್ಯರನ್ನು ಸಾರಂಗದೇವನು ಮಾಡಿಕೊಂಡು ಉತ್ತರ ಭಾಗಕ್ಕೆ ಬಂದ ಗಂಡಾಂತರವನ್ನು ದೂರಮಾಡಬೇಕೆಂದು ಅತ್ತಕಡೆಗೆ ನಡೆದನು. ಈ ಕಾಲದಲ್ಲಿ ಈ ಮಠದ ಉತ್ಪನ್ನವು ಲಕ್ಷಾಂತರ ರೂಪಾಯಿಗಳ ವರೆಗೆ ಇದ್ದಿತೆಂದು ತಿಳಿಯುತ್ತದೆ.

ಮುಂದೆ ಸಾರಂಗದೇವನು ಮೈಸೂರ ಸಂಸ್ಥಾನದಲ್ಲಿರುವ ತುಮಕೂರ ಜಿಲ್ಹೆಯಲ್ಲಿರುವ ಶಿವಗಂಗೆಯ ಕ್ಷೇತ್ರಕ್ಕೆ ಬಂದನು. ಈ ಭಾಗದಲ್ಲಿ ಅನೇಕ ಕಾಲ ಮಳೆ ಇಲ್ಲದೆ ದುರ್ಭಿಕ್ಷೆ ಬಿದ್ದಿರಲು ಅಲ್ಲಿ ಮಳೆಯು ಕರಿಯುವಂತೆ ಮಾಡಲು ಅವನಿಗೆ ಮಳೆಯ ಮರುಳಸಿದ್ಧೇಶ್ವರ ಎಂಬ ಹೆಸರು ಬಂದಿತು. ಈ ಶಿವಗಂಗೆಯ ಸ್ಥಳದಲ್ಲಿಯೂ ಗುಮ್ಮಳಾಪುರವೆಂಬ ಗ್ರಾಮದಲ್ಲಿಯೂ ಸಾರಂಗದೇವರು ಮಠಗಳನ್ನು ಸ್ಥಾಪಿಸಿ ಅವುಗಳಿಗೆ ಸಿದ್ಧಲಿಂಗದೇಶಿಕನೆಂಬ ಶಿಷ್ಯನನ್ನು ನೇಮಿಸಿದನು.

ಆ ಮೇಲೆ ಬಳ್ಳಾರಿ ಜಿಲ್ಲಾ ಉಜ್ಜನಿಗೆ ಬಂದನು. ಅಲ್ಲಿಂದ ಕಪ್ಪಡಿಯ ಸಂಗಮನಾಥನ ಸ್ಥಳಕ್ಕೆ ಬಂದನು. ಈ ಬಗ್ಗೆ ಗ್ರಂಥದಲ್ಲಿಯ ವಿವರಣೆಗಳು ಏನಂದರೆಃ—

"ಶತ್ರುಗಳು ಭಕ್ತರ ಮಾಡಿ ಮರುಳಾರ್ಯನೆನಿಸಿಕೊಂಡು ಯತ್ರ (?) ಭಾವದಿ ಕಪ್ಪಡಿಯ ಸ್ಥಳಕ್ಕೆ ತಾವು ಬಂದು ನದಿಯಲ್ಲಿ ನಿಂದುಕೊಂಡು ಸಂಗಮೇಶ್ವರಲಿಂಗ, ವಿದಿತ ದರುಶನಗೊಂಡು ಲಿಂಗಪೂಜೆಯಮಾಡಿ । ಸದಮಲಾತ್ಮನ ಭಕ್ತಿಯನು ಕೈಕೊಂಡು । ಮುದದಿ ಮಠವನು ರಚಿಸಿದಂ । ಚಂದದಲಿ ಬರಿಸಿದತ್ತನು ಪರರಾಯರ ಭಕ್ತಿಲಿ । ಒಂದೊಂದು ಸ್ವಾಸ್ತಿ ವಿತ್ತಗಳ ಪಡಕೊಂಡು ಪತ್ರಗಳ ಸಹಿತ । ಕಂದು ಗೊರಳನವತಾರ ಮೂರ್ತಿ ಸಾರಂಗದೇವರ ನಾಮದಿಂದ ಮೆರೆದನು. ॥ ೮ ॥

ಇದರ ಮೇಲಿಂದ ಉಜ್ಜಯನಿಯಿಂದ ಸಾರಂಗದೇವನು ಕಪ್ಪಡಿ ಸಂಗಮೇಶ್ವರನಲ್ಲಿಗೆ ಬಂದು ಅಲ್ಲಿ ಒಂದು ಮಠವನ್ನು ಕಟ್ಟಿಸಿ, ಅನೇಕ ರಾಜರಿಂದ ಸ್ವಾಸ್ತಿಗಳ ಪಡೆದನು. ಈ ಸಾರಂಗ ಮಠವು ಸಂಗಮೇಶ್ವರ ದೇವಾಲಯದ ಬಲಪಕ್ಕದಲ್ಲಿಯೇ ಈಗಲೂ ಇರುತ್ತದೆ. ಮುಂದೆ ಸ್ವಾಸ್ತಿಗಳನ್ನು ಪಡೆದಿದ್ದರ ವೃತ್ತಾಂತವು ಈ ಪ್ರಕಾರ ವಿವರಿಸಲ್ಪಟ್ಟರುತ್ತದೆ. ಅದು ಏನಂದರೆ—

ಪರಗಣೆ ಕರ್ತು ವಿಜಾಪುರ ಪ್ರಾಂತದೊಳು ಮೆರೆವದೊಂದು ಯಳಮಲಿ ಎಂಬ ಪುರದರಸು । ವರ ಚಂದ್ರಶೇಖರನು ಸುಖದಿಂದ ರಾಜ್ಯವಾಳುತ್ತಿರಲು ಸಂತೋಷದಿಂದೆ ॥ ಚರತಿಂಥಣಿ ಇದಿರ್ಗೊಂಡು ಕರತಂದು ತನ್ನ ಅರಮನೆಯಲ್ಲಿ ತೃಪ್ತಿಪಡಿಸಿ ಹರುಷವ ಪಡೆದು ತಾ ವರಪುರವನು ರಚಿಸಿಕೊಟ್ಟ ಹರಕೆಯನು ಪಡಕೊಂಡು ಸುಖದಿಂ ರಾಜ್ಯವಾಳುತಾ ॥ ೧೦ ॥



ಅಂದರೆ ಸಾರಂಗದೇವನು ವಿಜಾಪುರ ಜಿಲ್ಹೆಯಲ್ಲಿರುವ ಈಗಿನ ಆಲಮೇಲಕ್ಕೆ ಬಂದು ಅಲ್ಲಿ ಆಳುತ್ತಿದ್ದ ಚಂದ್ರಶೇಖರನೆಂಬ ಅಧಿಪತಿಯಿಂದ ಮನ್ನಣೆಯನ್ನು ಹೊಂದಿದನೆಂತಲೂ ಅಲ್ಲಿ ಒಂದು ಮಠವನ್ನು ಸ್ಥಾಪಿಸಿದನೆಂತಲೂ ಅಲ್ಲಿ "ತಮ್ಮ ಪಾದದಲ್ಲಿ ಉದ್ಭವಿಸಿದ ಮರಿಯನ್ನು ಇಟ್ಟಂತೆ" ಯೂ ತಿಳಿದುಬರುತ್ತದೆ. ಈ ಗ್ರಾಮದಲ್ಲಿ ಸಾರಂಗ ಮಠವೆಂಬ ಮಠವು ಈಗಲೂ ಇರುತ್ತದೆ. ಮುಂದೆ ಅಲ್ಲಿಯ ಒಂದು ತೋಟದಲ್ಲಿ ಬ್ರಹ್ಮರಾಕ್ಷಸನು ವಾಸಮಾಡಿಕೊಂಡು ಜನರನ್ನು ಬಹಳ ಪೀಡಿಸುತ್ತಿದ್ದದರಿಂದ, ಸ್ವಾಮಿಗಳು ಅಲ್ಲಿ ಜಪತಪಗಳನ್ನು ನಿರ್ವಹಿಸಿ ಆ ರಾಕ್ಷಸನನ್ನು ಓಡಿಸಿದರೆಂತಲೂ ಹೇಳಲ್ಪಟ್ಟಿದೆ.

ಮುಂದೆ ಆಲಮೇಲಕ್ಕೆ ಸಮೀಪವಾಗಿರುವ ಅಬ್ದುಲ್‌ಪುರಕ್ಕೆ ಹೋಗಿ ಅಲ್ಲಿ ಒಂದು ಮಠವನ್ನು ಸ್ಥಾಪಿಸಿ ಸಿಂದಗಿ ಗ್ರಾಮಕ್ಕೆ ಬಂದನು. ಅಲ್ಲಿ ಒಂದು ಜೈನ ದೇವಾಲಯದಲ್ಲಿ ಏಳು ಜಡೆಯ ರಾಕ್ಷಸಿಸಿರಲು, ಅದನ್ನು ಸಾರಂಗದೇವನು ಓಡಿಸಿ ಆ ದೇವಾಲಯವನ್ನು ಮಠವನ್ನಾಗಿ ಮಾಡಿ ಮೂವರು ಶಿಷ್ಯರನ್ನು ಆ ಸ್ಥಳದಲ್ಲಿ ಇಟ್ಟನು. ಇದರಿಂದ ಅಲ್ಲಿ ಅಧಿಕಾರಿಮಠ, ರಾಕ್ಷಸೀಮಠ ಮತ್ತು ಚೌಕೀಮಠ ಎಂದು ಮೂರು ಮಠಗಳಾದವು.

ಮುಂದೆ ಸಾರಂಗದೇವನು ಬಾಗೇವಾಡಿ ಗ್ರಾಮಕ್ಕೆ ಬರಲು, ಅಲ್ಲಿಯ ನಂದಿನಾಥನ ಗುಡಿಯ ಪೂಜೆಯನ್ನು ಬ್ರಾಹ್ಮಣರು ನಿರ್ವಹಿಸುತ್ತಿದ್ದುದನ್ನು ನೋಡಿ ಅಲ್ಲಿಯ ಅಧಿಪತಿಯಿಂದ ಅದನ್ನು ತಪ್ಪಿಸಿ ವೀರಶೈವರನ್ನು ಅಲ್ಲಿ ನಿಯಮಿಸುವಂತೆ ಮಾಡಿ ಅಲ್ಲಿಯೂ ಒಂದು ಮಠವನ್ನು ಸ್ಥಾಪಿಸಿದನು. ಈ ಗ್ರಾಮದಲ್ಲಿ ಸಾರಂಗಮಠವೆಂಬ ಮಠವು ಈಗ್ಗೆಯೂ ಇದೆ.

ಆಮೇಲೆ ಸಾರಂಗದೇವನು ಬೆಳ್ಳುಬ್ಬಿ ಗ್ರಾಮಕ್ಕೆ ಬರಲು, ಈ ಭಾಗದ ಅಧಿಪತಿಯಾದ ಕೊಲ್ಹಾರದ ದೇಸಾಯಿಗೆ ಪಿಶಾಚ ಬಾಧೆಯಾದದ್ದರಿಂದ, ಅದನ್ನು ಅವನು ತಪ್ಪಿಸಿದ ಮೂಲಕ, ಆಸ್ಥಳದಲ್ಲಿ ಅವನಿಗೆ ಒಂದುಮಠವು ಕಟ್ಟಿಸಿ ಕೊಡಲ್ಪಟ್ಟಿತು. ಮತ್ತು ದೇಸಾಯಿಯು ವೀರಶೈವ ದೀಕ್ಷೆಯನ್ನು ಸಾರಂಗದೇವನಿಂದ ಹೊಂದಿದ್ದಲ್ಲದೆ ಅಲ್ಲಿಯ ಬಹು ಜನರು ವೀರಶೈವ ಮತವನ್ನು ಅವಲಂಬಿಸಿದರು. ಈ ಬೆಳ್ಳುಬ್ಬಿಯು ಈಗ ವಿಜಾಪುರ ತಾಲೂಕಿನಲ್ಲಿದೆ ಮತ್ತು ಕೊಲ್ಹಾರ ಗ್ರಾಮವು ಬಾಗೇವಾಡಿ ತಾಲೂಕಿನಲ್ಲಿದ್ದು ಅದು ಈ ದೇಸಾಯರ ಗ್ರಾಮವಾಗಿದೆ.

ಮುಂದೆ ಸಾರಂಗದೇವನು ಯುರ್ಜರಿ ಎಂಬ ಗ್ರಾಮಕ್ಕೆ ಬಂದು ಅಲ್ಲಿಯೂ ಒಂದು ಮಠವನ್ನು ಸ್ಥಾಪಿಸಿದನು. ಇದು ಹೈದರಾಬಾದ ಸಂಸ್ಥಾನದಲ್ಲಿದ್ದು ಈ ಸ್ಥಳದಲ್ಲಿ ಸಾರಂಗ ಮಠವು ಈಗಲೂ ಅಸ್ತಿತ್ವದಲ್ಲಿ ಇದೆ.

ಆ ಮೇಲೆ ಸಾರಂಗದೇವನು ಸಂಗಮಕ್ಕೆ ಬಂದು ವಾಸಿಸಹತ್ತಿದನು.

ಈ ಪ್ರಕಾರ ಅಲ್ಲಿ ಅವನು ವಾಸಿಸುತ್ತಿರಲು "ಗೀಜಗನಪಳ್ಳಿ" ಯಲ್ಲಿ [ಇದು ವಿಜಾಪೂರ ಪಟ್ಟಣದ ಪೂರ್ವದ ಹೆಸರು] ಒಬ್ಬ ಮುಸಲ್ಮಾನ ಅರಸನು ಆಳುತ್ತಿದ್ದು, ಅಲ್ಲಿ ಬೇತಾಳನೊಬ್ಬನು ಅವನನ್ನು ಬಹಳ ತೊಂದರೆ ಪಡಿಸುತ್ತಿದ್ದದರಿಂದ ಬಾದಶಹನು ಸಾರಂಗದೇವನನ್ನು ತನ್ನಲ್ಲಿಗೆ ಬರಮಾಡಿಕೊಂಡನು. ಆಗ ಸಾರಂಗದೇವನು ಬಾದಶಹನ ಬಾಧೆಯನ್ನು ಪರಿಹಾರ ಮಾಡಲು ಅವನಿಗೆ ಅಲ್ಲಿ ಅನೇಕ ಸ್ವಾಸ್ತ್ಯಗಳನ್ನು ಕೊಟ್ಟನು.

ಇದರಿಂದ ಸಾರಂಗದೇವನ ಕೀರ್ತಿಯು ದೇಶದಲ್ಲಿ ಬಹಳ ಹೆಚ್ಚಾಗಿ ಹಬ್ಬಿತು. ಮುಂದೆ 'ಹನಗುಂದ' ಸೀಮೆಯ ದೇಸಾಯಿ ಮಲ್ಲರಡ್ಡಿ ಎಂಬವನು ಅವನನ್ನು ತನ್ನಲ್ಲಿಗೆ ಬರಮಾಡಿಕೊಂಡು ಅವನಿಂದ ದೀಕ್ಷೆಯನ್ನು ಹೊಂದಿದನು. ಅವನಿಗೆ ಸಂಗಾಪುರ ಎಂಬ ಗ್ರಾಮವನ್ನು ಉಂಬಳಿಯಾಗಿ ಹಾಕಿಕೊಟ್ಟನು. ಈ ಮಲ್ಲರಡ್ಡಿಯು ರಕ್ಕಸಗಿ ದೇಸಾಯರ ಪೂರ್ವಜನಿರಬಹುದೆಂದು ತೋರುತ್ತದೆ.

"ಪರಗಣೆ ಕರ್ತುರ ಹನಗುಂದ ಸೀಮೆ ದೇಸಾಯಿಗಳಾ । ವರ ಮಲ್ಲರಡ್ಡೇರ। ರಕ್ಷಗಿಯ ದೊರೆಗಳ ಭಕ್ತಿಯ ಕೈಕೊಂಡು ಸುಖದಿಂದಿರುತಲಿ ॥೧೩॥ ಪುತ್ರಕಾಮೇಷ್ಟಿ ವರವನಿತ್ತು ಲಿಂಗಪ್ಪ ನಾಮದಿಂ ನೇತೃಭಾವದಿ ಸಂಗಾಪುರ ಗ್ರಾಮವನು । ದತ್ತ ಉಂಬಳಿ ಪಡೆದು ಪತ್ರವನು ಲಿಖಿಸಿಕೊಂಡು ಸಾರಂಗದೇವ ಮುದದಿಂ ॥ ಕರ್ತುರ ದೇಸಾಯಿಗಳ ನಾಮದಿ ಶಕೆ ಸಹಿತ । ಮಿತಿ ಸಾವಿರದ ಎಣಕಿಲಿ ಇನ್ನೂರರವತ್ತು । ಚಿತ್ರಭಾನು ಸಂವತ್ಸರ ಶ್ರಾವಣ ಶುದ್ಧ ದಶಮಿ ಗುರುವಾರದಿಂ ॥೧೪॥

ಆ ಮೇಲೆ ಅದೇ ಹುನುಗುಂದ ತಾಲೂಕಿನಲ್ಲಿರುವ ಕೆಲೂರ ನಾಡಗೌಡರಿಂಡ ಕರೆಯಲ್ಪಟ್ಟವನಾಗಿ ಅ ಸ್ಥಳದಲ್ಲಿಯೂ ಸಾರಂಗದೇವನು ಆಸ್ತಿಯನ್ನು ಪಡೆದನು.



"ಪರಕೆಯನು ಕೊಟ್ಟು ತೆರಳುವ ಸಮಯದೊಳು ಬಂದು । ಧರೆಯಲ್ಲಿ ಸ್ವೈಯಿಕ್ಕಿ ಸಾಷ್ಟಾಂಗ ಪ್ರಣಮನಾಗಿ । ಕೆಲವರ ನಾಡಗೌಡರ ಮಲ್ಲಪ್ಪ ಕರವಿಡಿದು ತಮ್ಮ ಸ್ಥಳಕ್ಕೆ ಕರಕೊಂಡು ಹೋದಬಳಿಕ ॥ ನಿರುತದಿಂದ ಮಠವ ರಚಿಸಿಕೊಟ್ಟು ಮುದನಿಂದೆ । ವರ ತೃಪ್ತಿಗೊಳಿಸಿ ಆಶೀರ್ವಾದವನು ಪಡಕೊಂಡು ತನ್ನ ಅರಮನೆಯಲ್ಲಿ ಸುಖದ ಅನುಭಾವ ಗೋಷ್ಠಿಯಳು ಇರುತಿರಲು ಒಂದು ದಿವಸ ॥೧೫॥ ಸ್ವಾಸ್ತಿ ವಿತ್ತಗಳ ಪಸಗಿ । ಪಳ್ಳಾಯ ಮುಂತಾದ ಮಸ್ತಕವ ಮಾಡಿಸಿ ಜಯಪತ್ರವ ಮಾಡಿಕೊಟ್ಟು । ಸ್ವಸ್ತದಿಂದರುತೊಂದು ಗದ್ದಿಗೆಯ ಬಂಧಿಸಿಕೊಟ್ಟು ....

ಆ ಮೇಲೆ ಈಗಿನ ಕುಷ್ಟಿಗಿ ಸೀಮೆಯಲ್ಲಿರುವ ಚಳ್ಳಗೆರೆಯ ದೇಸಾಯಿ ಕಸ್ತುರಿಯ ಕೋನೇರಿ ವೆಂಕಪ್ಪನಾಯಕನು ಸಾರಂಗದೇವನನ್ನು ತನ್ನಲ್ಲಿಗೆ ಬರಮಾಡಿಕೊಂಡು ಅನೇಕ ಸ್ವಾಸ್ತಿ ವೃತ್ತಿಗಳನ್ನು ಕಲ್ಪಿಸಿಕೊಟ್ಟನು ಮತ್ತು ತಾನು ವೀರಶೈವ ಧರ್ಮವನ್ನು ಸ್ವೀಕರಿಸಿದನು. ಅಲ್ಲಿ ಒಂದು ಮಠವೂ ಸ್ಥಾಪಿಸಲ್ಪಟ್ಟು, ಅಲ್ಲಿ ಕಾಲಾರಿ ಸಿದ್ಧದೇಶಿಕ ಎಂಬ ಶಿಷ್ಯನು ಇಡಲ್ಪಟ್ಟನು.

ಮುಂದೆ "ಪೂವಲ್ಲಿಪುರದ ಮಠಾಧಿಕಾರಿ ಪಂಚವಣ್ಣಿಗೆ ಸಿದ್ಧಯ್ಯಗಳ ಮಗಳ ತೆಗೆದು ಆ ಸಿದ್ಧದೇಶಿಕನಿಗೆ ಲಗ್ನ ಕರ್ಮವ ಮಾಡಿ" ಎಂದು ಹೇಳಲ್ಪಟ್ಟದೆ. ಅಂದರೆ ಈ ಶಿಷ್ಯನಿಗೂ ಈಗಿನ ಹೊಲಿಯ ಪಂಚವಣ್ಣಿಗೆಯ ಮಠದವರಿಗೂ ಅವನು ಶರೀರ ಸಂಬಂಧವನ್ನುಂಟು ಮಾಡಿದನೆಂದು ಹೇಳಲ್ಪಟ್ಟದೆ. ಪೂವಲ್ಲಿ ಅಥವಾ ಹೊಲಿಯು ಬೆಳಗಾವ ಜಿಲ್ಲೆಯಲ್ಲಿದೆ.

"ಮೋದದಿಂ ಕಸ್ತುರಿಯ ಕೋನೇರಿ, ವೆಂಕಪ್ಪ ನಾಯಕನಿಂದು । ಸದ್ಭಕ್ತಿಯಿಂದೆ ಸಾಷ್ಟಾಂಗ ಪ್ರಣಮಿತನಾಗಿ । ಕೂಡಿ ಸಾಧುಗಳ ಸಹಿತ ಕುಷ್ಟಗಿ ಸೀಮೆಯಲಿ ಚಳ್ಳಗೆರೆಗೆ ಕರಕೊಂಡು ಬಂದನು ॥೧೬॥

ಭೇದವಿಲ್ಲದೆ ಸ್ವಾಸ್ತಿ ವೃತ್ತಿಗಳ ಗ್ರಾಮವನು ಲಿಖಿಸಿಕೊಟ್ಟು ಮೋದದಿಂದಿರುತಲಿ ॥ ಕಾಮಹರ ನಂದನ ನಾಮ ಸಂವತ್ಸರ ನೃಪ ಶಾಲಿವಾಹನ ಶಕೆ । ಸಂದುನಾಮವು ಸಾವಿರದ ನೂರೊಂದನೆಯ ಕ್ಷೇಮದಿಂದೆ ಆಶೀರ್ವಾದವನ ಕೊಟ್ಟುಬಂದರು ಕಪ್ಪಡಿಯ ಸ್ಥಳಕೆ ಮುದನಿಂ ॥೧೭

ಆ ಮೇಲೆ ಸಾರಂಗದೇವನು ವಿಜಯನಗರದ ಅರಸು ದೇವರಾಜನ ಆ ಸ್ಥಾನಕ್ಕೂ ಬಂದು ಅಲ್ಲಿಯೂ ಮನ್ನಣೆ ಹೊಂದಿದನು.

"ಎಲ್ಲ ಚಾಗಿಗಳರಸ ದೇವರಾಜ | ಬಲ್ಲಿದ ಚರಮೂರ್ತಿಗಳಿಗೆ ಮಠವನು ರಚಿಸಿ ಸಾರಂಗದೇವನು | ಅಲ್ಲಿಂದ ಆನೆಗುಂದಿಗೆ ಬಂದು ನಿರ್ಮಿತ ಮಠವನು ಪಡೆದು | ಖುಲ್ಲವಾದಿಗಳ ಗದ್ದು ಅಲ್ಲಿ ಮಹತ್ವವಮಾಡಿ | ಅಲ್ಲಿಗಲ್ಲಿ ತೋರುತ ಸಂಗಮ ಸ್ಥಲಕ್ಕೆ ಬಂದನು." ||೧೨||

ಇದರಿಂದ ಸಾರಂಗದೇವನು ಹಂಪೆಗೂ ಅಮೇಲೆ ಅನೆಗೊಂದಿಗೂ ಬಂದಂತೆ ತಿಳಿಯುತ್ತದೆ. ಈ ಆನೆಗೊಂದಿಯಲ್ಲಿ ತನ್ನ "ಸೂತ್ರದವರನ್ನು ಇಟ್ಟು" ಎಂದು ಹೇಳಿರುವದರಿಂದ ಅಲ್ಲಿ ಒಂದು ಮಠವನ್ನು ಸ್ಥಾಪಿಸಿ ಶಿಷ್ಯನನ್ನು ಅಲ್ಲಿ ಇಟ್ಟಂತೆ ತಿಳಿಯುತ್ತದೆ.

ಈ ಪ್ರಕಾರ ಸಾರಂಗದೇವನು ಶ್ರೀಶೈಲದಿಂದ ತಮಿಳುದೇಶದ ವರೆಗೆ ಪ್ರವಾಸಮಾಡಿ ಅನೇಕ ಧಾರ್ಮಿಕ ಕೃತ್ಯಗಳನ್ನು ಎಸಗಿದನು ಮತ್ತು ಅನೇಕ ಮಠಗಳನ್ನು ಸ್ಥಾಪಿಸಿದನು. ಈ ಪ್ರಕಾರ ಸ್ಥಾಪಿಸಿ ಕಡೆಗೆ ಬಸವೇಶ್ವರನ ಐಕ್ಯಸ್ಥಾನವಾದ ಸಂಗಮ ಕ್ಷೇತ್ರವನ್ನು ತನ್ನ ವಾಸಸ್ಥಳವನ್ನಾಗಿ ಮಾಡಿಕೊಂಡು ವಿಜಾಪುರ ಬಾದಶಹನಿಂದ ಮನ್ನಣೆಯನ್ನು ಹೊಂದಿ, ಈ ಪ್ರಾಂತದಲ್ಲಿರುವ ಎಲ್ಲ ಮಹತ್ವದ ದೇಸಾಯಿ ಮೊದಲಾದ ಅಧಿಪತಿಗಳನ್ನು ವೀರಶೈವ ಧರ್ಮದಲ್ಲಿ ಬರಮಾಡಿಕೊಂಡು ಈ ನಾಡಿನಲ್ಲೆಲ್ಲ ಧರ್ಮಜಾಗ್ರತಿಯನ್ನು ಮಾಡಿದನು. ಮತ್ತು ಕಡೆಗೆ ಈ ಸಂಗಮನಾಥನ ಸಮೀಪದಲ್ಲಿಯೇ ಐಕ್ಯವನ್ನು ಹೊಂದಿದನು. ಇದನ್ನು ಗ್ರಂಥಕರ್ತನು ಕೆಳಗೆ ಬರೆದ ಮೇರೆಗೆ ವಿವರಿಸಿರುವನು.

"ಅಲ್ಲಿ ಅಲ್ಲಿಗೆ ತಮ್ಮ ವಂಶೀಭೂತರನ್ನಿಟ್ಟು | ಉಲ್ಲಸದಿಂದೆ ಇರುವ ಸಮಯದೊಳು ಮಹಾದೇವ | ಕೈಲಾಸದಿಂದೆ ಈರ್ವರು ಚರಮೂರ್ತಿಗಳು ಪತ್ರಸಹಿತ ಕಳುಹಿದಂ ಬಂದರು || ಎಲ್ಲ ಕ್ಷೇತ್ರಕ್ಕೆ ಅಧಿಕ ಸಂಗಮೇಶ್ವರಲಿಂಗ | ಸ್ಥಳದಲ್ಲಿ ಭಕ್ತಿಯನು ಮಾಡಿ ಸಂತೋಷ ಪಡೆದು | ಎಲ್ಲರ ಕರೆದು ಹೇಳಿ ಕೇಳಿ ಉಲ್ಲಾಸದಿಂದ ಲಿಂಗೈಕ್ಯಪಡೆದನು ಸಾರಂಗಸಿದ್ಧೇಶ್ವರ ನಾಮದಿಂ ||೧೯|| ನೆರೆದಿರ್ದ ಭಕ್ತಮಹೇಶ್ವರರು ಕೂಡಿ ತಾವು | ಹರುಷದಿಂದೆ ದಾನಧರ್ಮವ ನೆಸಗಿ ಕರಕಮಲ ಮುಗಿದು ವರ ಗದ್ದುಗೆಯನೆಸಗಿ ಸಾರಂಗ ಸಿದ್ಧೇಶ್ವರನ ಗುಡಿ ಎಂದು ಕರೆದರು ಸರ್ವಜನರು || ವರಕೀರ್ತಿ ಪಡೆದ ಮರುಳಸಿದ್ಧೇಶ್ವರನ



ಅವತಾರಮೂರ್ತಿ ಧರೆಯಲ್ಲಿ ಸಾರಂಗದೇವರು ಮಹಾ ಪುರುಷರು ಎಂದು ಕರವೆತ್ತಿ ಕೊಂಡಾಡಿದರು ಕಂಡ್ಯಾ ಸಾರಂಗದೇವರ ಚಾರಿತ್ರ್ಯಮಂ ||೨೦||

ಸಂಗಮದಲ್ಲಿಯ ಪ್ರತಿಯಲ್ಲಿ ಇಷ್ಟು ಮಾತ್ರ ಉಲ್ಲೇಖವಿದ್ದು, ಗುಳೇದಗುಡ್ಡದ ಮಠದಲ್ಲಿಯ ಪ್ರತಿಯಲ್ಲಿ ಸಾರಂಗದೇವನು ಮೃತಪಟ್ಟ ತರುವಾಯ ವರ್ತಿಸಿದ ಸಂಗತಿಗಳು ವರ್ಣಿಸಲ್ಪಟ್ಟಿವೆ. ಇವಾದರೂ ಮಹತ್ವವಿರುವದರಿಂದ, ಅವುಗಳನ್ನು ನಾವು ಮುಂದೆ ಕೊಡುತ್ತೇವೆ.

---

## ಶಿವಸಂಗಪ್ಪಯ್ಯ.

ಸಾರಂಗದೇವನಿಗೆ ಒಬ್ಬ ತಮ್ಮನಿದ್ದು, ಈತನಿಗೆ ಶಿವಸಂಗಪ್ಪಯ್ಯ, ಕಾಶೀದೇವರು, ಮತ್ತು ಸೂರಪ್ಪಯ್ಯ ಎಂದು ಮೂವರು ಮಕ್ಕಳಿದ್ದರು. ಈ ಮಕ್ಕಳುಗಳಲ್ಲಿ ಶಿವಸಂಗಪ್ಪಯ್ಯನು ಸಂಗಮದಲ್ಲಿ, ಕಾಶೀದೇವರು, ಚಳ್ಳಗೆರೆಯಲ್ಲಿ ಮತ್ತು ಸೂರಪ್ಪಯ್ಯನು ಆನೇಗೊಂದಿಯಲ್ಲಿ ಅಧಿಕಾರಿಗಳಾಗಿ ಆಯಾ ಮಠಗಳ ಕಾರ್ಯಗಳನ್ನು ನಿರ್ವಹಿಸಹತ್ತಿದರು.

ಇವರಲ್ಲಿ ಶಿವಸಂಗಪ್ಪಯ್ಯನು ಬಳ್ಳಾರಿ ಜಿಲ್ಲಾ ಕೊಟ್ಟೂರ ಗ್ರಾಮಕ್ಕೆ ಕರಿಸಲ್ಪಟ್ಟವನಾಗಿ ಬಾಳೇಹಳ್ಳಿಯ ಸಿಂಹಾಸನಾಧಿಪತಿಗಳಾದ ಚನ್ನವೀರ ಸ್ವಾಮಿಗಳು ಮತ್ತು ಪರ್ವತ ಸಿಂಹಾಸನಾಧಿಪತಿಗಳಾದ ವೀರಭಿಕ್ಷಾವರ್ತಿ ಸ್ವಾಮಿಗಳು ಈ ಮೂವರೂ ಹರಪನಹಳ್ಳಿಯ ಸಂಸ್ಥಾನದ ದೊರೆಗೆ ವೀರಶೈವ ದೀಕ್ಷೆಯನ್ನು ಕೊಟ್ಟರು. ಅಂದಿನಿಂದ ಈ ಧೊರೆಗಳು ವೀರಶೈವ ಸಾಂಪ್ರದಾಯಕ್ಕೆ ಅನುಸರಿಸಿ ಕಡೆಯವರೆಗೂ ಇದ್ದರು.

ಆ ಮೇಲೆ ಶಿವಸಂಗಪ್ಪಯ್ಯನು ಕೊಟ್ಟೂರು ಉಜ್ಜನಿಗೆ ಬರಲು ಅವನಿಗೆ ಅಲ್ಲಿಯೂ ಮಠಮಾನ್ಯಗಳು ಅರಸನಿಂದ ಕೊಡಲ್ಪಟ್ಟವು. ಈ ಮಠಕ್ಕೆ ಶಿವಸಂಗಪ್ಪನ ಮಗ ಸಣ್ಣಸಾರಂಗೇಶ್ವರನೆಂಬವನು ಚರಂತಿಯಾಗಿ ನೇಮಿಸಲ್ಪಟ್ಟನು.

---

# ಸಣ್ಣ ಸಾರಂಗೇಶ್ವರ.

ಈ ಸಣ್ಣ ಸಾರಂಗೇಶ್ವರನು ವಿದ್ಯಾವಂತನಾಗಿ ದೇಶದಲ್ಲಿ ಬಹು ಪ್ರಖ್ಯಾತನಾದನು. ಅವನು ಮೂಲ ಸಾರಂಗದೇವರಂತೆ ಮಹತ್ವಿಕ ಪುರುಷನಾಗಿ ದೇಶದಲ್ಲಿ ಸಂಚರಿಸಿ, ಅನೇಕ ಮಹತ್ಕಾರ್ಯಗಳನ್ನು ಮಾಡಿದ್ದು ತೋರಿಬರುತ್ತದೆ. ಅವುಗಳನ್ನು ವಾಚಕರ ಮುಂದೆ ಇಡುತ್ತೇವೆ.

ಸಣ್ಣಸಾರಂಗೇಶ್ವರನು ಮೂಲ ಸಾರಂಗೇಶ್ವರನು ಸ್ಥಾಪಿಸಿದ ಮಠಗಳ ಆಡಳಿತೆಯನ್ನು ಸಮಪಡಿಸಿ ಅವುಗಳನ್ನು ನಿರ್ವಹಿಸುವ ಕಾರ್ಯವನ್ನು ಚನ್ನಾಗಿ ಜರಗಿಸಹತ್ತಿದನು.

ಉಜ್ಜನಿಯಲ್ಲಿ ಪರಪನಹಳ್ಳಿಯ ಧೊರೆಯು ಇರಲಾಗಿ ಒಂದು ದಿವಸ ಅನೇಕ ಜನ ಪಂಡಿತರು ಅವನ ಆಸ್ಥಾನದಲ್ಲಿ ನೆರೆದಿದ್ದರು. ಆಗ್ಗೆ ಧರ್ಮ ಚರ್ಚೆಗಳು ನಡೆಯಲು, ಸಣ್ಣಸಾರಂಗೇಶ್ವರನು ಎಲ್ಲರನ್ನು ವಿವಾದದಲ್ಲಿ ಸೋಲಿಸಿ, ವೀರಶೈವ ಮತದ ಹೆಚ್ಚಳವನ್ನು ಅರಸನಿಗೆ ಮನವರಿಕೆ ಮಾಡಿಕೊಟ್ಟನು. ಆಗ ಅರಸನು ಅಲ್ಲಿದ್ದ ಶಿಖಾ, ಶೈಲ, ಕಠಾರಿಗಳನ್ನು ಅವನಿಗೆ ಕೊಟ್ಟನು. ಆ ಮೇಲೆ ಸಣ್ಣಸಾರಂಗೇಶ್ವರನು ಉಜ್ಜನಿಯಲ್ಲಿ ತನ್ನ ಶಿಷ್ಯರನ್ನಿಟ್ಟು ಕಾಶಿಗೆ ಹೋದನು.

ಕಾಶಿಯಲ್ಲಿ ಕೆಲದಿನವಿದ್ದು ಮರಳಿ ಸ್ವದೇಶಕ್ಕೆ ಬಂದು ಸಂಗಮಕ್ಷೇತ್ರದಲ್ಲಿರುವ ಮಠವನ್ನು ಜೀರ್ಣೋದ್ಧಾರ ಮಾಡಿದನು. ಆಮೇಲೆ ವಿಜಾಪುರ ತಾಲೂಕಿನಲ್ಲಿರುವ ಉಪ್ಪಲದಿನ್ನಿ ಗ್ರಾಮ, ಆಮೇಲೆ ಇದೇ ಜಿಲ್ಲೆಯಲ್ಲಿರುವ ಬಿಳಗಿಯ ಪ್ರಸಿದ್ಧ ದೇವಾಲಯವಾದ ಸಿದ್ಧೇಶ್ವರ ಈ ಸ್ಥಳಗಳನ್ನು ಸಂದರ್ಶಿಸಿ ಆಮೇಲೆ ತಿರುಗಿ ಸಂಗಮಕ್ಷೇತ್ರಕ್ಕೆ ಬಂದು ಅಲ್ಲಿ ತಮ್ಮ "ಪಾದಸೂತ್ರದ ಮರಿಯನ್ನು ಇಟ್ಟು"

ಆಮೇಲೆ ಬಾಗಲಕೋಟೆ ಪ್ರಾಂತದ "ದೇಸಾಯಿ ಸರನಾಡಗೌಡ"ರಾದ ಕೆಂಚವೀರ ಎಂಬ ಅಧಿಪತಿಯು ಅವರನ್ನು ಕರಿಸಿಕೊಂಡು ಅವರಿಂದ ದೀಕ್ಷೆಯನ್ನು ಹೊಂದಿದನು. ಮತ್ತು ಚೌಡಾಪುರ ಮತ್ತು ಹೊನ್ನಿಹಾಳ ಎಂಬ ತಮ್ಮ ಗ್ರಾಮಗಳಲ್ಲಿ ಈ ಸಣ್ಣಸಾರಂಗೇಶ್ವರನಿಗೆ ಮಠಗಳನ್ನು ಕಟ್ಟಿಸಿಕೊಟ್ಟನು.



ಆಮೇಲೆ ಸ್ವಾಮಿಗಳು ಅದೇ ಬಾಗಲಕೋಟೆ ತಾಲೂಕಿನಲ್ಲಿರುವ ಶಿರೂರ ಗ್ರಾಮಕ್ಕೆ ಬಂದು ಅಲ್ಲಿಯವರಿಂದಲೂ ವಿಶೇಷ ಮನ್ನಣೆಯನ್ನು ಹೊಂದಿದನು.

ಆ ಕಾಲಕ್ಕೆ ಕಮತಿಗಿ ಗ್ರಾಮದಲ್ಲಿ "ಕಲ್ಲನಾಗತಿಯ ಸಂತತಿಯವರು" ವಿಶೇಷವಾಗಿ ಇರುತ್ತಿದ್ದು ನೊಸಲ ಭೈರಿ ಶೀನಪ್ಪನಾಯಕನೆಂಬವನು ಅವರಿಗೆ ಮುಖ್ಯಸ್ತನಾಗಿ ಸುತ್ತಲಿನ ಸೀಮೆಯನ್ನು ಆಳುತ್ತಿದ್ದನು. ಈತನು ಸಣ್ಣಸಾರಂಗದೇವನನ್ನು ಬರಮಾಡಿಕೊಂಡು ಅವನಿಂದ ದೀಕ್ಷೆಯನ್ನು ಹೊಂದಿದನು. ಆಗ ಅವನ ಅನುಯಾಯಿಗಳೆಲ್ಲರೂ ಲಿಂಗಧಾರಿಗಳಾದರು.

ಐಹೊಳೆ ಗ್ರಾಮದಲ್ಲಿ ಹಿರೇ ಸೋಮನಾಯಕನೆಂಬ ಬೇಡರ ಧೊರೆಯು ಸುತ್ತಲಿನ ಸೀಮೆಯನ್ನು ಆಳುತ್ತಿದ್ದನು. ಆತನು ಸಣ್ಣಸಾರಂಗದೇವನನ್ನು ಬರಮಾಡಿಕೊಂಡು ವೀರಶೈವ ಮತಾನುವರ್ತಿಯಾದನು ಮತ್ತು ಆತನು ಅಲ್ಲಿ ಮಠಮಾನ್ಯಗಳನ್ನು ಸಾರಂಗದೇವನಿಗೆ ಹಾಕಿಕೊಟ್ಟನು,

ಮುಂದೆ ಪಟ್ಟದಕಲ್ಲಿನಲ್ಲಿ ವೀರಪ್ಪನಾಯಕನೆಂಬವನು ಆಳುತ್ತಿದ್ದು ಆತನೂ ಸಣ್ಣಸಾರಂಗದೇವನಿಂದ ಶಿವದೀಕ್ಷೆಯನ್ನು ಹೊಂದಿದನು ಮತ್ತು ಚಿರಮೆಲಿಗಿ, ಪಟ್ಟದಕಲ್ಲು, ಅಕರಗಲ್ಲು, ಸಿದ್ದನಕೊಳ್ಳ, ಉಪನಹಾಳ ಈ ಸ್ಥಳಗಳಲ್ಲಿ ಮಠಮಾನ್ಯಗಳನ್ನು ಮಾಡಿಕೊಟ್ಟನು ಮತ್ತು ಸ್ವಾಮಿಗಳಾದರೂ ಅಲ್ಲಿ ಪಂಚಲಿಂಗಗಳನ್ನು ಸ್ಥಾಪನೆ ಮಾಡಿದರು.

ಈ ಮೇರೆಗೆ ಸಣ್ಣಸಾರಂಗದೇವನು ಅನೇಕ ಮಹತ್ವದ ಕಾರ್ಯಗಳನ್ನು ಮಾಡಿ ತಿರುಗಿ ಸಂಗಮಕ್ಕೆ ಬಂದನು ಮತ್ತು ದೇಶದಲ್ಲಿರುವ ಸಾರಂಗದೇವರ ಮಠಗಳನ್ನೆಲ್ಲ ತಮ್ಮ ಸಹೋದರರ ಸಂತತಿಯವರಲ್ಲಿ ಹಂಚಿಕೊಟ್ಟು, ತಾನು ತೀರ್ಥಾಟನಕ್ಕೆ ತೆರಳಿದನು.

ಈ ಪ್ರಕಾರ ತೀರ್ಥಾಟನವನ್ನು ಕೆಲವು ದಿವಸ ಮಾಡಿ ಸ್ವಾಮಿಗಳು ಕಡೆಗೆ ಹುನಗುಂದಕ್ಕೆ ಬಂದರು. ಅಲ್ಲಿಂದ ಕೆಲೂರಕ್ಕೆ ಬಂದು ಅಲ್ಲಿಯೇ ಸಮಾಧಿಸ್ತರಾದರು.

ಈ ಮೇರೆಗೆ ಸಣ್ಣಸಾರಂಗದೇವನ ವೃತ್ತಾಂತವಿದೆ. ಇದರ ಮೇಲಿಂದ ಇವನೂ ಪಂಡಿತನಾಗಿ ದೇಶದಲ್ಲಿ ಅನೇಕ ಧರ್ಮೋದ್ಧಾರದ ಕಾರ್ಯಗಳನ್ನು ನಿರ್ವಹಿಸಿದ್ದು ತೋರಿಬರುತ್ತದೆ.

ಮುಂದೆ ಕೆಲವು ವರ್ಷಗಳ ಮೇಲೆ ಗುಳೇದಗುಡ್ಡ ಗ್ರಾಮವು ವಸಾಹತ್ತು ಮಾಡಲ್ಪಟ್ಟಿತು. ಇದು ಈಗ ವಿಜಾಪುರ ಜಿಲ್ಲೆಯಲ್ಲಿ ಬಹು ದೊಡ್ಡ ಗ್ರಾಮವಾಗಿದೆ. ಈ ಗ್ರಾಮ ಸ್ಥಾಪನೆಯ ಕಾಲಕ್ಕೆ ಈ ಸಾರಂಗದೇವರ ಮಠದ ವಂಶಿಕರಾದ ಶಿವಸಂಗಪ್ಪಯ್ಯನೆಂಬವನು ಚರಂತಿಯಾಗಿ ನೇಮಿಸಲ್ಪಟ್ಟಿದ್ದು ಅವನ ಹಸ್ತದಿಂದಲೇ ಈ ಗ್ರಾಮದ ಸ್ಥಾಪನೆಯ ಕಾರ್ಯವು ನೆರವೇರಿಸಲ್ಪಟ್ಟಿತು. ಈ ಬಗ್ಗೆ ಈ ಗ್ರಂಥದಲ್ಲಿ ಉಲ್ಲೇಖವಿರುವದೇನಂದರೆ:— "ಗುಳೇದಗುಡ್ಡದ ಪೇಟಿ ಪರ್ವತಿ ನಿರ್ಮಾಣ ಮಾಡುವದರ ಸಲುವಾಗಿ ಶಿಷ್ಯಮಕ್ಕಳು ದೇಸಾಯಿ ಹಿರೆ ಎಲಗುರ್ದಪ್ಪನಾಯಕ ಜೋಳಚಗುಡ್ಡದ ಮುದಿಯಪ್ಪ ಶೆಟ್ಟರು ಕೂಡಿ ಸಮಸ್ತರು ಮಾತಾಡಿ ಬಿನ್ನಹ ಪತ್ರ ಬರೆದು ಕರೆಯಿಸಿಕೊಂಡರು. ಇವರ ಧೂಳಪಾದೋದಕ ಚಲ್ಲಿ ಪೂಜಿಸಿ ಪುನಸ್ಕಾರವ ಮಾಡಿ ಕೌಲು ಚಾಂಡೆಯ ನಡಿಸಿ ಶೆಟ್ಟರ ಹೆಸರಿಲಿ ಗುರುಗಳಿಗೆ ಲಿಂಗ ಮುದ್ರೆ ಪಂಚಸ್ಥಾಪನೆ ಮಾಡಿಸಿ ಮಠ ನೋಡಬೇಕೆಂದು ವತನ ಸ್ವಾಸ್ತಿವೃತ್ತಿ ಮರ್ಯಾದೆ ನೋಡಲೆಂದು ಗೊತ್ತುಮಾಡಿದರು." ಆದ್ದರಿಂದ ಗುಳೇದಗುಡ್ಡದಲ್ಲಿ ಈ ಸಾರಂಗ ಮಠಾಧಿಪತಿಗಳನ್ನೇ ಮುಖ್ಯವಾಗಿಟ್ಟುಕೊಂಡು ಈ ಪಟ್ಟಣವು ಸ್ಥಾಪಿಸಲ್ಪಟ್ಟಿದ್ದು ಕಂಡುಬರುತ್ತದೆ.

ಗುಳೇದಗುಡ್ಡದ ಗ್ರಂಥದಲ್ಲಿ ಮುಂದಿನ ವಂಶಜರ ಇನ್ನೂ ಕೆಲವು ವೃತ್ತಾಂತಗಳಿದ್ದು ಅವುಗಳಲ್ಲಿ ಮಹತ್ವದ ಐತಿಹಾಸಕ ಸಂಗತಿಗಳು ತೋರಿ ಬರದ್ದರಿಂದ ನಾವು ಅವುಗಳನ್ನು ಈ ಚರಿತ್ರೆಯಲ್ಲಿ ಕೊಟ್ಟಿಲ್ಲ. ಆದರೆ ಮುಂದಿನ ಸಂತತಿಯವರು ದೇಶದಲ್ಲಿರುವ ಸಾರಂಗಮಠಗಳನ್ನು ಕಾಲ ಕಾಲಕ್ಕೆ ಹಂಚಿಕೊಂಡ ಹಾಗೆ ಉಲ್ಲೇಖಗಳಿವೆ.

ಮೇಲ್ಕಂಡ ವೃತ್ತಾಂತಗಳು ಬಹಳ ಮಹತ್ವದವೆಂಬುದನ್ನು ನಾವು ವಾಚಕರಿಗೆ ವಿಶದಪಡಿಸುವ ಅವಶ್ಯವಿಲ್ಲ. ಇವುಗಳ ಮೇಲಿಂದ ಪೂರ್ವಕಾಲದಲ್ಲಿ ಸಿಂಹಾಸನಾಧಿಪತಿಗಳೂ ಮಹತ್ವದ ಮಠಾಧೀಶ್ವರರೂ ಕರ್ನಾಟಕದಲ್ಲಿ ಯಾವಪ್ರಕಾರ ಧರ್ಮಜಾಗ್ರತಿಯ ಕಾರ್ಯಗಳಲ್ಲಿ ತೊಡಗುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಇವರು ಧರ್ಮಬೋಧೆ ಮಾಡುತ್ತ ದೇಶದಲ್ಲಿ ಸಂಚಾರ ಮಾಡುವರು. ತಮ್ಮ ಬೋಧೆಗೆ ಮನಗೊಂಡವರನ್ನು ವೀರಶೈವ ಮತಸ್ತರನ್ನಾಗಿ ಮಾಡಲು ಹಿಂದೆಗೆಯಲಿಲ್ಲ. ಮತ್ತು ತಮ್ಮ ಕಾರ್ಯವು ಆಯಾ

24
1934



ಸ್ಥಳಗಳಲ್ಲಿ ನಿರಂತರವಾಗಿ ಸಾಗಬೇಕೆಂದು ಅಲ್ಲಲ್ಲಿ ಮಠಗಳ ಸ್ಥಾಪನೆಯನ್ನು ಮಾಡುವರು. ಈ ಮೇರೆಗೆ ಅವರ ಕಾರ್ಯಕ್ರಮಗಳಿದ್ದುದು ಮೇಲ್ಕಂಡ ವಿವರಣೆಗಳಿಂದ ಕಂಡುಬರುತ್ತದೆ. ಇದರಿಂದ ದೇಶದಲ್ಲಿ ಪರಧರ್ಮಿಗಳಿಂದ ಭಯಂಕರ ಆಘಾತಗಳು ಕಾಲಕಾಲಕ್ಕೆ ಉಂಟಾಗುತ್ತ ಬಂದಿದ್ದರೂ, ಧರ್ಮಜಾಗ್ರತೆಯು ಕರ್ನಾಟಕದಲ್ಲಿ ಸ್ಥಿರವಾಗಿ ಉಳಿದು, ಹಿಂದುತ್ವವು ಇಲ್ಲಿ ರಕ್ಷಿಸಲ್ಪಟ್ಟಿತೆಂದು ತೋರುತ್ತದೆ.

ಬಾಮನಿ ಮತ್ತು ವಿಜಯನಗರದ ರಾಜರ ಕಾಲದಿಂದಲೂ ಕರ್ನಾಟಕದಲ್ಲಿ ಅನೇಕ ಜನಾಂಗದವರು ದಾಳಿ ಇಡುತ್ತ ಮತ್ತು ಅಲ್ಲಲ್ಲಿ ಸಂಸ್ಥಾನಗಳನ್ನೂ ದೇಸಗತಿಗಳನ್ನೂ ಸ್ಥಾಪಿಸುತ್ತ ಬಂದಂತೆ ತೋರುತ್ತದೆ. ಇದಕ್ಕೆ ಮೈಸೂರು ಕಿತ್ತೂರು, ನವಲಗುಂದ, ಸುರಪುರ, ಚಿತ್ರಕಲ್ಲದುರ್ಗ, ಹರಪನಹಳ್ಳಿ, ಸ್ವಾದಿ, ಬೀಳಗಿ, ಹಾಗಲವಾಡಿ ಈ ಮೊದಲಾದ ಗ್ರಾಮಗಳ ಅಧಿಪತಿಗಳೇ ಉದಾಹರಣೆಯಾಗಿದ್ದಾರೆ. ಇವರಲ್ಲಿ ಬಹುಜನರ ಪೂರ್ವಜರು ವೀರಶೈವರಿರದೆ, ಹಿಂದುಗಡೆ ಅವರು ವೀರಶೈವರಾದ ಹಾಗೆ ಅವರ ಚರಿತ್ರೆಗಳಿಂದ ತಿಳಿದು ಬರುತ್ತದೆ. ಈ ಪ್ರಕಾರ ಆ ಕಾಲಕ್ಕಿನ ಸಮಾಜಗಳೂ ಅವುಗಳ ಅಧಿಪತಿಗಳೂ ಅಹಿಂಸಾತ್ಮಕವಾದ ಮತ್ತು ಸುಸಂಸ್ಕೃತವಾದ ವೀರಶೈವ ಧರ್ಮವನ್ನು ಸ್ವೀಕರಿಸಿದ್ದರ ಮೇಲಿಂದ ಆಗಿನ ವೀರಶೈವ ಧರ್ಮೀಯರ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ತೇಜಸ್ಸು ಎಷ್ಟು ಮಹತ್ತರವಾಗಿದ್ದಿತೆಂಬದು ಬಹು ಚನ್ನಾಗಿ ವ್ಯಕ್ತವಾಗುತ್ತದೆ. ಮರಾಟರ ವೈಭವದ ಕಾಲದಲ್ಲಿ ಅನೇಕರು ಮರಾಠರಾದದ್ದು ತಿಳಿದು ಬರುತ್ತದೆ. ಆದರೆ ಕರ್ನಾಟಕದ ವೈಭವದ ಕಾಲದಲ್ಲಿ ಅಲ್ಲಿಯ ದೊಡ್ಡ ಜನಾಂಗಗಳೂ ವೀರಪುರುಷರೂ ಮಹತ್ವದ ಮನೆತನದವರೂ ವೀರಶೈವರಾದದ್ದು ಕಂಡು ಬರುತ್ತದೆ. ಹೀಗಾಗಬೇಕಾದರೆ ಆ ಕಾಲಕ್ಕಿನ ವೀರಶೈವರ ಸಂಸ್ಕೃತಿ, ಉದಾರಭಾವ, ಮತ್ತು ಧಾರ್ಮಿಕ ವರ್ಗದವರ ಉಚ್ಚವರ್ತನೆ ಇವುಗಳೇ ಮುಖ್ಯಕಾರಣವಾದವೆಂದು ನಾವು ಹೇಳಲು ಏನೂ ಪ್ರತ್ಯವಾಯವಿಲ್ಲ. ಸಾರಂಗಮಠದ ಅಧಿಪತಿಗಳು ಈ ಪ್ರಕಾರ ಅತ್ಯಂತ ಉಜ್ವಲ ಭಾವದಿಂದ ವರ್ತಿಸಿದ್ದು ಈ ಲೇಖದಲ್ಲಿ ಕೊಟ್ಟ ವೃತ್ತಾಂತಗಳಿಂದ ಸ್ಪಷ್ಟವಾಗುತ್ತದೆ. ಮೂಲ ಸಾರಂಗದೇವನನ್ನು ತಮಿಳು ದೇಶದ ಅನೇಕ ರಾಜರೂ, ಸಮಾಜಗಳೂ ಮನ್ನಿಸುತ್ತಿದ್ದರಲ್ಲದೆ ಉತ್ತರ ದೇಶದಲ್ಲಿ ಮುಖ್ಯವಾಗಿ ವಿಜಾ

ಪುರ ಮತ್ತು ಹೈದರಾಬಾದ ಪ್ರಾಂತಗಳಲ್ಲಿಯ ಅನೇಕ ಮಹತ್ವದ ರಾಜಕೀಯ ಮನೆತನಗಳು ಅವರಿಗೆ ಒಳಗಾಗಿ ನಡೆದು ವೀರಶೈವ ಧರ್ಮವನ್ನು ಪಾಲಿಸುತ್ತ ಬಂದದು. ಈ ವರ್ಣನೆಗಳು ಕೇವಲ ಕಾಲ್ಪನಿಕವಿರದೆ ನಿಜವಿರುತ್ತವೆಂಬುದನ್ನು ಆ ಸ್ಥಳಗಳಲ್ಲಿ ಈಗ್ಗೆಯೂ ಕಂಡುಬರುವ ಸಾರಂಗಮಠಗಳೇ ಸಾಕ್ಷಿಯಾಗಿವೆ. ಮತ್ತು ಈ ಸಾರಂಗ ಮಠಗಳೆಲ್ಲವೂ ಆ ಸ್ಥಳಗಳಲ್ಲಿ ಜನರಿಂದ ಅತ್ಯಂತ ಭಕ್ತಿಯಿಂದ ಈಗಲೂ ಕಾಣಲ್ಪಡುತ್ತವೆ. ಈ ಎಲ್ಲ ಸಂಗತಿಗಳು ಸಾರಂಗದೇವನ ಮೇಲ್ಕಂಡ ವೃತ್ತಾಂತಗಳ ನಿಜತ್ವವನ್ನು ತೋರಿಸುತ್ತವೆ.

ಸಾರಂಗದೇವನು ಕಾಶಿಯಲ್ಲಿ ಮಳೆಯ ಮಲ್ಲೇಶನೆಂದೂ, ಪರ್ವತಪ್ರಾಂತಕ್ಕೆ ಬಂದಬಳಿಕ ಸಾರಂಗದೇವನೆಂದೂ, ಮೈಸೂರ ಸೀಮೆಯಲ್ಲಿ ಮರುಳ ಸಿದ್ಧೇಶ್ವರನೆಂದೂ, ಪ್ರಸಿದ್ಧಿಯನ್ನು ಹೊಂದಿದ್ದು ತಿಳಿಯುತ್ತದೆ. ಈ ಅಂಶಗಳು ನಿಜವೆಂಬುದಕ್ಕೆ ಇ ಚರಿತ್ರೆಯನ್ನು ಬರೆದ ಗ್ರಂಥಕಾರನು ಕೆಲವು ಆಧಾರಗಳನ್ನು ಕೊಟ್ಟಿರುವನು. ಅವು ಯಾವವೆಂದರೆ, "ಕರ್ನಾಟಕ ಮಧ್ಯದೇಶದಲ್ಲಿ ಪ್ರಸಿದ್ಧವಾದ ಮಳೆ ಬಗಿ ಇದ್ದು ಮರುಳಾರ್ಯ ಸೂತ್ರಿಕರು ಗುರುಸ್ಥಲದಲ್ಲಿ ಮಠಸ್ಥಲದಲ್ಲಿ ಶಿವಾಧಿಕ್ಯ ಪುರಾಣದಲ್ಲಿ ಸಾರಂಗದೇವರ ಮಹತ್ವವನ್ನು ಹೇಳುತ್ತಾರೆ. ಶಿವರಹಸ್ಯಾಗಮದಲ್ಲಿ ಮರುಳಾರ್ಯರ ಸಾಂಪ್ರದಾಯವು ಹೇಳುವದು ನಿಶ್ಚಯವು. ಗುರುಚಾರಿತ್ರ್ಯದಿಂದ ಅನುಮಾನ ಬಿದ್ದರೆ ಸಂಶಯ ಪರಿಹಾರ ಆಗುವದು." ಎಂದು ಗ್ರಂಥದಲ್ಲಿ ಅಂದಿರುತ್ತಾನೆ. ಈ ಗ್ರಂಥಗಳಲ್ಲಿ ಶಿವಾಧಿಕ್ಯ ಪುರಾಣವನ್ನು ನಾವು ನೋಡಿದ್ದು, ಅದು ಬಸವಲಿಂಗ ಎಂಬ ಕವಿಯಿಂದ ರಚಿತವಾಗಿದೆಂದು ತಿಳಿಯುತ್ತದೆ. ಅದರಲ್ಲಿ ಆರಂಭದ ಶ್ಲೋಕಗಳಲ್ಲಿ ಬಸವ, ಚನ್ನಬಸವ, ಅಲ್ಲಮ, ಮಡಿವಾಳ, ವೀರಸೊಡ್ಡಳ ಇವರನ್ನೂ ಉಳಿದ ಶಿವಶರಣರನ್ನೂ ಸ್ತುತಿಸಿ ಶ್ರೀ ಮಲ್ಲೇಶನನ್ನೂ ಹೊಗಳಿದ್ದಾನೆ. ಈ ಮಲ್ಲೇಶನು ಮಂಗಳವಾಡ ರಾಷ್ಟ್ರಕ್ಕೆ ಮಳೆಯನ್ನು ತಂದನೆಂತಲೂ ಸಾರಂಗ ಸಿಂಹಾಸನಕ್ಕೆ ಬಂದನೆಂತಲೂ ಇದರಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಈ ಬಸವಲಿಂಗ ಕವಿಯ ಉಲ್ಲೇಖವನ್ನು ಕರ್ನಾಟಕ ಕವಿಚರಿತ್ರೆ ಭಾಗ ೨ ಪುಟ ೩೫೩ ನೇದ್ದರಲ್ಲಿ ರಾ|| ಬ|| ಆರ್. ನರಸಿಂಹಾಚಾರ್ಯರು ಮಾಡಿರುವರು. ಅದರಲ್ಲಿ ಅವರು ಕೊಟ್ಟ ಅವತರಣದಿಂದ ಈ ಬಸವಲಿಂಗ ಕವಿಯು ಸಾರಂಗದೇವನ ಶಿಷ್ಯನೆಂದು ತಿಳಿದುಬರುತ್ತದೆ. ಈ ಅವತರಣವು



ಏನಂದರೆ ಇವನ ಗುರು "ಸಾರಂಗ ಸಿಂಹಾಸನಕ್ಕೆ ಬಂದು ಘನಲಿಂಗಪದವ ಸಂಗಡಿಸಿದರಿಂದ ಮಂಗಳವಾಡ ರಾಷ್ಟ್ರದೊಳು ಮೂರು ಸಿಂಹಾಸನದ ಡಾಮರವನೆಬ್ಬಟ್ಟಿ ಭೂರಿವೃಷ್ಟಿಯ ಕರೆದು ಬಗೆವೆತ್ತ ಚನ್ನಮಲ್ಲೇಶ್ವರ" ಎಂದು ಇದೆ. ಹೀಗೆ ಬಸವಲಿಂಗ ಕವಿಯು ಹೀಗೆ ಬರೆದದ್ದು ವಿಚಾರಾರ್ಹವಾಗಿದೆ.

ಒಟ್ಟಾರೆ ಹೇಳಬೇಕಾದರೆ ಸಾರಂಗ ಮಠಾಧೀಶ್ವರರು ತಮ್ಮ ಆರಂಭಕಾಲದಲ್ಲಿ ಅತ್ಯಂತ ದುಸ್ತರವಾದ ಪ್ರಸಂಗಗಳನ್ನು ಎದುರಿಸಬೇಕಾಯಿತು. ಇದು ಬಸವೇಶ್ವರನ ತರುವಾಯ ಸ್ವಲ್ಪ ಅವಧಿಯಲ್ಲಿಯೇ ಇರುತ್ತದೆ. ಆಗ ಇಸ್ಲಾಮ ಧರ್ಮೀಯರು ಕರ್ನಾಟಕದಲ್ಲಿ ಪ್ರಬಲರಾಗಹತ್ತಿದ್ದರು. ಅವರು ಇಲ್ಲಿಗೆ ಬಂದ ಸ್ವಲ್ಪ ಕಾಲದಲ್ಲಿಯೇ ಸಾರಂಗ ಮಠಾಧೀಶ್ವರರು ಉಗಮ ಹೊಂದಿ ತಮ್ಮ ಧಾರ್ಮಿಕ ಚಳವಳಿಯನ್ನು ಪ್ರಾರಂಭಿಸಿದರು. ಆರಂಭದಲ್ಲಿ ಅವರು ಶ್ರೀಶೈಲ ಮತ್ತು ಪುದುಚೆರೆಯಲ್ಲಿ ಪ್ರಬಲರಾದರು. ಮುಂದೆ ಅವರು ಮಧ್ಯ ಕರ್ನಾಟಕ ಪ್ರದೇಶದಲ್ಲಿರುವ ಕೂಡಲಸಂಗಮ ಸ್ಥಳದಲ್ಲಿ ನಿಂತುಕೊಂಡು ಜನರಲ್ಲಿ ಧರ್ಮ ಜಾಗ್ರತಿಯನ್ನು ಮಾಡಿದರು. ಅಷ್ಟರಲ್ಲಿ ಕಲಬುರ್ಗಿ, ಬೀದರ ಪಟ್ಟಣಗಳಲ್ಲಿ ಮುಸಲ್ಮಾನರು ನಿಂತು ಅವುಗಳನ್ನು ತಮ್ಮ ರಾಜಧಾನೀ ಸ್ಥಳಗಳನ್ನಾಗಿ ಮಾಡಿಕೊಂಡಿದ್ದರು. ಆದರೆ ಅವರು ಇಲ್ಲಿಯ ಹಿಂದೂ ಜನರನ್ನು ಅವಲಂಬಿಸದೆ ತಮ್ಮ ರಾಜ್ಯಗಳನ್ನು ಬೆಳಿಸುವದು ಅಸಂಭವವಾಗಿತ್ತು. ಅಷ್ಟರಲ್ಲಿ ಇಲ್ಲಿಯ ವೀರಶೈವ ಮಠಾಧಿಪತಿಗಳು ಮುಖ್ಯವಾಗಿ ಸಾರಂಗ ಮಠಾಧಿಪತಿಗಳು ಇಲ್ಲಿಯ ದೇಸಾಯಿ ನಾಡಗೌಡರನ್ನು ವೀರಶೈವರನ್ನಾಗಿ ಮಾಡಿಕೊಂಡಿದ್ದರು. ಇವರು ವಿಜಾಪುರ, ಕಲಬುರ್ಗಿ, ರಾಯಚೂರ, ಬೀದರ ಜಿಲ್ಹೆಗಳಲ್ಲಿ ಪ್ರಬಲ ಸೈನ್ಯಾಧಿಕಾರಿಗಳಾಗಿದ್ದರು. ಇದರಿಂದ ಮುಸಲ್ಮಾನ ಧರ್ಮವು ಕರ್ನಾಟಕದಲ್ಲಿ ಪಸರಿಸುವದು ಅಶಕ್ಯವಾಯಿತು.

ಈ ಕಾಲಕ್ಕೆ ಮಧ್ಯ ಕರ್ನಾಟಕ ದೇಶದಲ್ಲಿ ಪರ್ವತ ಸಿಂಹಾಸನ, ಬಾಳೇಹಳ್ಳೀ ಪೀಠಾಧಿಪತಿಗಳು, ಉಜ್ಜನಿ ಸಿಂಹಾಸನ ಇವು ಮಹತ್ವದ ಸಿಂಹಾಸನ ಮಠಗಳಾಗಿದ್ದವು. ಇವರೆಲ್ಲರೂ ಈ ಕಾಲದಲ್ಲಿ ಪರಸ್ಪರ ಐಕ್ಯತೆಯಿಂದ ವರ್ತಿಸಿದ್ದು ಅತಿ ಮಹತ್ವದ್ದಾಗಿದೆ. ಇವರಲ್ಲದೆ ಸಾರಂಗ ಮಠಾಧೀಶ್ವರರು ಕೆಲಕಾಲ ಉಜ್ಜನಿ ಸಿಂಹಾಸನದಲ್ಲಿ ಆರೂಢರಾಗಿದ್ದುದು ತಿಳಿದು ಬರುತ್ತದೆ. ಆಗ

ಅವರೂ ಉಳಿದ ಪೀಠಾಧಿಪತಿಗಳೂ ಕೂಡಿಕೊಂಡು ವಿಜಯನಗರದ ದೇವರಾಜ, ಹರಪನಹಳ್ಳಿ ಮೊದಲಾದವುಗಳಲ್ಲಿಯ ದೊರೆಗಳು ಇವರಿಗೆ ವೀರಶೈವ ದೀಕ್ಷೆಯನ್ನು ಕೊಟ್ಟು ಅವರ ಬೆಂಬಲದಿಂದ ತಮ್ಮ ವರ್ಚಸ್ಸನ್ನು ನಾಡಿನಲ್ಲಿ ಬೆಳಸಿಕೊಂಡಿದ್ದರು. ಈ ಕಾರಣದಿಂದ ವೀರಶೈವ ಧರ್ಮವು ಇಲ್ಲಿ ಉಳಿಯಿತು.

ಈ ಸಂಗತಿಯನ್ನು ನಮ್ಮ ಈಗಿನ ಇಲ್ಲಿಯ ಪೀಠಾಧಿಪತಿಗಳು ಗಮನಿಸುವದು ಅವಶ್ಯವದೆ. ಈಗ ಕರ್ನಾಟಕವು ಏಕೀಕೃತವಾಗಿದೆ. ಆದ್ದರಿಂದ ಇಂಥ ಕರ್ನಾಟಕದಲ್ಲಿ ನಮ್ಮ ಪೀಠಾಧಿಪತಿಗಳಾದ ಉಜ್ಜನಿ ಸಿಂಹಾಸನ, ತರಳಬಾಳು ಸಿಂಹಾಸನ, ಬಾಳೇಹಳ್ಳೀ ಸಿಂಹಾಸನ ಮತ್ತು ಚಿತ್ರಕಲ್‌ದುರ್ಗದ ಮುರುಘಾಮಠದ ಶೂನ್ಯ ಸಿಂಹಾಸನ ಇವರೆಲ್ಲರೂ ಸಂಘಟನೆಯುಳ್ಳವರಾಗಿ ತಮ್ಮ ಸಮಾಜ ಮತ್ತು ಧರ್ಮ ಇವುಗಳ ಉದ್ಧಾರಕ್ಕಾಗಿ ಪ್ರಯತ್ನಿಸುವ ಕಾಲವು ಬಂದಿದೆ. ೧೯೫೬ನೇ ಅಕ್ಟೋಬರದ ಒಳಗಾಗಿ ವಿಸ್ತೃತ ಮೈಸೂರು ಅಥವಾ ಕರ್ನಾಟಕ ರಾಜ್ಯವು ಅಸ್ತಿತ್ವದಲ್ಲಿ ಬರಲಿದೆ. ಈ ಕಾಲದಲ್ಲಿ ನಮ್ಮ ಪೀಠಾಧಿಪತಿಗಳು ಮತ್ತು ಅವರ ಅನುಯಾಯಿಗಳು ತಮ್ಮ ಅಂತರಂಗದ ಕಲಹಗಳನ್ನು ಬಿಡಲೇಬೇಕು. ಇಲ್ಲದಿದ್ದರೆ ಇತರ ಸಮಾಜದವರು ವೀರಶೈವರ ವಿರುದ್ಧ ನಡಿಸಿರುವ ಪ್ರಯತ್ನಗಳು ಹೆಚ್ಚುತ್ತಲೇ ಹೋಗುವವು. ಹೀಗಾದಲ್ಲಿ ವೀರಶೈವ ಸಮಾಜವು ಅಸ್ತಿತ್ವದಲ್ಲಿ ಇದೆಯೋ ಇಲ್ಲವೋ ಎಂಬಂತಾಗುವ ಪರಿಸ್ಥಿತಿಯು ಪ್ರಾಪ್ತವಾಗಬಹುದು.

ಬಸವೇಶ್ವರನ ಕಾಲದಲ್ಲಿ ಸಾಂತರ ರಾಜರು [ಸಾಡರು] ನೋಣಂಬ ಪಲ್ಲವರು [ನೊಣಬರು] ಹೊಯಿಸಳರನ್ನು ಎದುರಿಸಿದ ಮಲಸರು [ಮಲವರು] ಇಂಥ ಬಲಾಢ್ಯ ಸಮಾಜದವರು ಮೈಸೂರಿನ ಉತ್ತರ, ಮಧ್ಯ ಮತ್ತು ಪಶ್ಚಿಮ ಭಾಗಗಳಲ್ಲಿ ೧೧ನೇ ೧೨ನೇ ಶತಮಾನಗಳಲ್ಲಿ ಪ್ರಬಲರಾಗಿ ರಾಜ್ಯ ವಾಳಿದರು. ಅದರಂತೆಯೇ ಈಗಿನ ಅವರ ವಂಶಜರು ತಮ್ಮ ಅಂತಃಕಲಹಗಳನ್ನು ಬಿಟ್ಟುಕೊಟ್ಟು ಬಸವೇಶ್ವರನ ಉಚ್ಚ ತತ್ವಗಳನ್ನು ಪಾಲಿಸುತ್ತ ಅವನ ಕಾಲದಲ್ಲಿ ಹೇಗೆ ಶಿವಶರಣರು ಅಥವಾ ಶಿವಾನುಭವಿಗಳು ಸಂಘಟನೆಯಿಂದ ನಡೆದು, ಪರವಾದಿಗಳನ್ನು ಪ್ರತಿಭಟಿಸಿದರೋ ಹಾಗೆಯೇ ಆಚರಿಸುವ ಸಮಯವು ಈಗ ಪ್ರಾಪ್ತವಾಗಿದೆ.



ಹಿಂದಿನ ಕಾಲದಲ್ಲಿ ಪೀಠಾಧಿಪತಿಗಳು ವಿರಕ್ತರಾಗಿರಲಿಲ್ಲ. ಅವರು ಲಗ್ನವಾದವರಿದ್ದರು. ಆದರೂ ಅವರು ಕೈಕೊಂಡ ಶ್ರೇಷ್ಠ ಕಾರ್ಯಗಳ ಮೂಲಕ ಅವರು ವರ್ಚಸ್ಸುಳ್ಳವರಾಗಿದ್ದರು. ಅವರ ಅನುಕರಣವನ್ನು ಈಗಿನ ಪೀಠಾಧಿಪತಿಗಳು ಮಾಡಿ ಐಕ್ಯತೆಯುಳ್ಳವರಾದಲ್ಲಿ ಭಕ್ತವರ್ಗಗಳೂ ಐಕ್ಯತೆಯನ್ನು ಹೊಂದುವವು. ಇದರಿಂದ ಬಸವೇಶ್ವರನ ಕಾಲದಲ್ಲಿ ವೀರಶೈವರಿಗುಂಟಾದ ಘನತೆಯು ಈ ಕಾಲದಲ್ಲಿಯೂ ಪುನರಾವೃತ್ತಿಯನ್ನು ಹೊಂದುವದರಲ್ಲಿ ಏನೂ ಸಂದೇಹವಿರಲಾರದು.

---

## ಸಾರಂಗ ಸ್ತೋತ್ರಪಂಚಕ

ಸಾರಂಗದೇವನ ಈ ಪುರಾತನ ಪದ್ಯಗಳು ಶಬ್ದಾಲಂಕಾರ ಅರ್ಥಾಲಂಕಾರಗಳಿಂದ ತುಂಬಿರುವವಲ್ಲದೆ ಬಹು ಪ್ರೌಢವಾಗಿವೆ. ಇವುಗಳಿಂದ ಕನ್ನಡ ಭಾಷೆಯ ಗಾಂಭೀರ್ಯವು ಸೂಚಿತವಾಗುವದು. ಬರೆದ ಅರ್ಥವೂ ಪುರಾತನಕಾಲದ್ದು.

ವಾರ್ಧಿಕಃ— ಸಾರಂಗ ಗಮನಸಖ ಸೂರ್ಪಕಾರಿಯ ಜನಕ ।
ಸಾರಂಗ ಪದಪದ್ಮ ಶಾಮಕರನಾಂಕಿತನೆ ॥
ಸಾರಂಗಭವನ ಪನ್ನಗವರ ಧರನೆ ಕಂಜಸಾರಂಗ ತನಯ ಹರನೇ॥
ಸಾರಂಗಧರ ಲಲಾಮನೆ ಮರುತಾಪ್ತನೆ ।
ಸಾರಂಗ ದಿಗ್ವಸನ ಸುರವಂದಿತದೇವ ।
ಸಾರಂಗ ಶ್ರವಣ ಕರಕಟಕ ಸಂಗಮದೇವ ಸಾರಂಗಗೋ
ಕರುಣಿಸೂ ॥೧॥

ಟಿಪ್ಪಣಿಃ— ಸಾರಂಗ= ಕುದುರೆ, ನಯನ, ನೀರು, ಎರಳೆ, ಆಕಾಶ, ಕಣ್ಣು, ಮೋಕ್ಷ.

ವಾರ್ಧಿಕಃ— ಸಾರಂಗಪದ್ಮಧರ ಜೀಮೂತಜಾನುರಣ ।
ಸಾರಂಗಮಣಿ ಪದ್ಮಧೂಮಾಂಕಗೋಪದ್ಮ ।
ಸಾರಂಗಸುರಜ್ಯೇಷ್ಠ ಶತಧರ್ಮ ನಮಿತಪದ ಸಾರಂಗಚರ್ಮಾಂಬರಾ॥

ಸಾರಂಗಶ್ರವಣ ಭೂಷಣಸುರಭಿಸಂಹಾರ ।
ಸಾರಂಗನಾಮಾಯುಧಂ ಕಲಿತಕರಪದ್ಮ ।
ಸಾರಂಗಜೇಟ ಸಿದ್ಧನಂಜೇಶ ಪಾಲಿಪುದು ಸಾರಂಗಪದ
ವನಿತ್ರಾ ॥೨॥

ಟಿಪ್ಪಣೆಃ— ಸಾರಂಗ= ಆಕಾಶ, ಸಾರಂಗಪದ್ಮ= ಆಕಾಶಗಂಗೆ, ಸಾರಂಗ ಘೃಣಿ= ಸೂರ್ಯ, ಗೋ= ನಯನ, ಪದ್ಮಸಾರಂಗ= ಕಮಲಾಕ್ಷ (ನಾರಾಯಣ) ಸಾರಂಗ= ಗಜ, ಸಾರಂಗಶ್ರವಣ= ಸರ್ಪ, ಸಾರಂಗ= ಚಂದ್ರ, ಸಾರಂಗ= ಶ್ರೇಷ್ಠವಾದ ದೇಹ, ಜೇಟ= ಜಟಾ.

ವಾರ್ಧಿಕಃ— ಸಾರಂಗವರ್ನಕಂ ಸೂತ್ರನಂ ಪಾತ್ರನಂ ।
ಸಾರಂಗ ಅಮೃತ ಶಿವಚರ್ಮನಂ ಧರ್ಮನಂ ।
ಸಾರಂಗಸಯಣ ಹರಿಮಿತ್ರನಂ ಪಾತ್ರನಂ ಸಾರಂಗಗಮನಸಖಗೋ
ಸಾರಂಗ ಅಂದಕುಶಲಲಾಟನಂ ಜೂಟನಂ ।
ಸಾರಂಗ ತನುಜ ವಾಮಭಾಗನಂ ಭೋಗನಂ ।
ಸಾರಂಗ ತೇಜ ಜನವಲಿಗನಂ ತಲಿಗನಂ ಸಾರಂಗ ಮೌಲಿ
ತ್ರಾಹೀ ॥೩॥

ಟಿಪ್ಪಣೆಃ—ಸಾರಂಗವರ್ಣ= ಧವಳವರ್ಣ, ಕಂ= ವಾಸುಕಿ ಎಂಬಫಣಿ, ಸೂತ್ರ= ಯಜ್ಞೋಪವೀತ, ಸಾರಂಗ= ಸ್ತಂಬರ ದೈತ್ಯ, ಅಮೃತ= ನಿತ್ಯ, ಸಾರಂಗ= ಕುದುರೆ, ಎರಳೆ, ಗೋ= ನಯನ, ಸಾರಂಗಕುಶ= ಆಕಾಶಗಂಗೆ, ಜೂಟ= ಜಡೆ, ಸಾರಂಗ= ಹಿಮವತ್ಪರ್ವತ, ಸಾರಂಗ= ಸೂರ್ಯ, ವಲಗ= ವ್ಯಾಘ್ರಾಸುರ, ಅಜಿನ= ಚರ್ಮ, ತಲಿಗ= ಧರಿಸಿದ, ಸಾರಂಗ= ಚಂದ್ರ.

ವಾರ್ಧಿಕಃ—. ಸಾರಂಗ ದೈತ್ಯಚರ್ಮಾಂಬರ ಧರ ದೇವಂ ।
ಸಾರಂಗ ಧರ ಕಲಾಜೂಟ ವಿಲಸದ್ದೇವ ।
ಸಾರಂಗ ವಾಹನಾದ್ಯಖಿಳ ದೇವರ ದೇವ ಸಾರಂಗಪಾಣಿ ದೇವಾ ॥
ಸಾರಂಗಧರ ಪರಮವಾಹನ ಮಹಾದೇವ ।
ಸಾರಂಗವೈರಿ ವಾಹನೆಯಾಣ್ಮನೆದೇವ ।
ಸಾರಂಗವದನ ಪಿತ ಪಂಪಾವಿರೂಪಾಕ್ಷ ಸಾರಂಗ ಪದ
ವೀವುದೂ ॥೪॥



ಟಿಪ್ಪಣೆಃ—ಸಾರಂಗದೈತ್ಯ= ಗಜಾಸುರ, ಸಾರಂಗ= ಎರಳೆ, ವಿಲಸತ್= ಒಪ್ಪುವ, ಸಾರಂಗ= ಐರಾವತ, ಎರಳೆ ಕೋಡು, ಸಾರಂಗ= ಆನೆ, ಪಂ= ಬ್ರಹ್ಮಾದಿ ಪಶುಗಳಿಗೆ, ಪ= ಪತಿಯಾದ, ಸಾರಂಗಪರ= ಮೋಕ್ಷಪದನೀಯುತ.

ವಾರ್ಧಿಕಃ— ಸಾರಂಗಪದ ನಮಲ ಗೋಭುವನ ಸಮರಕ್ಷ ।
ಸಾರಂಗಪಾಣಿ ಗೋಜನ್ಮ ಗೋಕರ ವಿಪುಳ ।
ಸಾರಂಗಮಥನ ಗೋವಚ್ಚ ಮುದದಿಂ ನಿಗಮ ಸಾರಂಗರಥ ವಿಶೇಷಾ
ಸಾರಂಗಚಾಪ ಗೋರಮ್ಯ ಗೋಪಂಚ ।
ಸಾರಂಗ ಸಿಂದುವರ ನಕ್ಷತ್ರ ಗೋಹುಗಳ ।
ಸಾರಂಗ ನವಿರ ಗೋಕರ್ನಕೆಯೂರವರ ಸಾರಂಗರೂಪ
ಶರಣೂ ॥೫॥

ಟಿಪ್ಪಣೆಃ— ಸಾರಂಗಪರ= ಅಶ್ವಪಾದಋಷೀಶ್ವರ, ಗೋಭುವನ= ದೇವ ಗಂಗೆ, ಸಾರಂಗ= ಎರಳೆ, ಗೋಜನ್ಮ= ಕಮಲೋದ್ಭವ [ಬ್ರಹ್ಮ], ಗೋ= ಮಸ್ತಕ, ಸಾರಂಗ= ಕಾಳಿಂದಿನಿ ನದಿ, ಗೋ= ನಯನ, ವಚ್ಚ= ಪಾದ, ಸಾರಂಗ= ಕುದುರೆ, ಮಹಾಮೇದ= ಪರ್ವತ, ಚಾಪ= ಬಿಲ್ಲು, ಗೋ= ಮಹಾ ಶೇಷ, ಗೋಪಂಚ= ಐದುಮುಖವುಳ್ಳ, [ಶಿವ], ಸಾರಂಗ= ಆಕಾಶ, ನವಿರ= ಮಂಡಲವಾಗುಳ್ಳಂಥ, ಸಾರಂಗರೂಪ= ಮೋಕ್ಷ ಸ್ವರೂಪ.

ಕ್ರಮಾಂಕ 1934
ಶಿವಬಸವ ನಗರ